

# ಮನೆ ಬಾಗಿಲಿಗೆ ಜಾತಿ, ಆದಾಯ ಪ್ರಮಾಣಪತ್ರ: ಉತ್ತರ ಕನ್ನಡದಲ್ಲಿ ಶೇ.85.76 ಸಾಧನೆ

## ಜಾತಿ ಪ್ರಮಾಣಪತ್ರ ಪಡೆಯಬೇಕಾದರೆ ಜನರು ಸ್ವತಃ ಕಚೇರಿಗೆ ಹೋಗಿ ಅರ್ಜಿ ಸಲ್ಲಿಸಿ, ಪರಿಶೀಲನೆ ಮುಗಿಯುವವರೆಗೆ ಕಾಯಬೇಕಿಲ್ಲ

• **ಉದಯವಾಹಿನಿ,**ಕಾರವಾರ:

ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಸರ್ಕಾರವೇ ಜನರ ಮನೆ ಬಾಗಿಲಿಗೆ ಬಂದು ಉಚಿತವಾಗಿ ಡಿಜಿಟಲ್ ಜಾತಿ ಮತ್ತು ಆದಾಯ ಪ್ರಮಾಣಪತ್ರಗಳನ್ನು ತಲುಪಿಸುವ ಕಾರ್ಯಕ್ರಮ ಜಾರಿಗೊಳಿಸಿದ್ದು, ಉತ್ತರ ಕನ್ನಡ ಜಿಲ್ಲೆಯಲ್ಲಿ ಇದುವರೆಗೆ 9.60 ಲಕ್ಷ ಜಾತಿ ಮತ್ತು ಆದಾಯ ಪ್ರಮಾಣಪತ್ರಗಳನ್ನು ವಿತರಿಸುವ

**1 : ಜಿಲ್ಲೆಯಲ್ಲಿ ಒಟ್ಟು 11,17,946 ಜಾತಿ**
**2 : ಸಹಿ ಪಡೆಯುವ ಪ್ರಕ್ರಿಯೆ ಬೇಕಿತ್ತು**
**3 : ಸರ್ವರ್ ಸಮಸ್ಯೆ ಮುಂತಾದ ಕಾರಣ**

ಮೂಲಕ ಶೇ.85.76ರಷ್ಟು ಸಾಧನೆ ಮಾಡಲಾಗಿದೆ.

ಸರ್ಕಾರದ ವಿವಿಧ ಇಲಾಖೆಗಳು ಒಟ್ಟಾಗಿ ಕೆಲಸ ಮಾಡಿ, ಕಂದಾಯ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಿ ಫಲಾನುಭವಿಗಳಿಗೆ ತಲುಪಿಸುವ ಈ ಪ್ರಕ್ರಿಯೆ ಹಲವು ತಿಂಗಳುಗಳ ಸಿದ್ಧತೆಯ ಫಲ. ಸಾಂಪ್ರದಾಯಿಕವಾಗಿ ಇಂತಹ ಪ್ರಮಾಣಪತ್ರಗಳನ್ನು ವಿತರಿಸಲು ಪ್ರತ್ಯೇಕ ಅರ್ಜಿ, ಪರಿಶೀಲನೆ, ಸಹಿ ಪಡೆಯುವ ಪ್ರಕ್ರಿಯೆ ಬೇಕಿತ್ತು. ಆದರೆ, ಈಗಾಗಲೇ ಸರ್ಕಾರದ ಬಳಿ ಇರುವ ಕಂದಾಯ ದಾಖಲೆ, ಜಾತಿ ಗಣತಿ ಮಾಹಿತಿ ಹಾಗೂ ಆಧಾರ್ ಸಂಪರ್ಕ ಬಳಸಿಕೊಂಡು, ಅರ್ಹ ಫಲಾನುಭವಿಗಳಿಗೆ ನೇರವಾಗಿ ಪ್ರಮಾಣಪತ್ರ ಸಿದ್ಧಪಡಿಸಿ ತಲುಪಿಸುವ ವಿಧಾನವನ್ನು ಅನುಸರಿಸಲಾಗುತ್ತಿದೆ.

**ತಾಲ್ಲೂಕುವಾರು ಮಾಹಿತಿ:** ಜಿಲ್ಲೆಯಲ್ಲಿ ಒಟ್ಟು 11,17,946 ಜಾತಿ ಮತ್ತು ಆದಾಯ ಪ್ರಮಾಣಪತ್ರಗಳನ್ನು ಉಚಿತವಾಗಿ ಸಾರ್ವಜನಿಕರ ಮನೆ ಬಾಗಿಲಿಗೆ ತೆರಳಿ ವಿತರಿಸುವ ಗುರಿ ಹೊಂದಲಾಗಿದ್ದು, ಒಟ್ಟು 9,60,218 ಪ್ರಮಾಣಪತ್ರಗಳನ್ನು ವಿತರಿಸಲಾಗಿದೆ. ಹೊನ್ನಾವರ ತಾಲ್ಲೂಕಿನಲ್ಲಿ 1,09,188, ಸಿದ್ದಾಪುರ 56,659, ಯಲ್ಲಾಪುರ 57,407 ಕಾರವಾರ 1,04,426, ಸೂಪಾ 54,318, ಅಂಕೋಲಾ 1,22,805, ಹಳಿಯಾಳ 56,702, ಶಿರಸಿ 94,509, ಮುಂಡಗೋಡು 75,019, ಭಟ್ಕಳ 43,699, ಕುಮಟಾ 1,65,025 ಮತ್ತು ದಾಂಡೇಲಿಯಲ್ಲಿ 23,461 ಪ್ರಮಾಣಪತ್ರಗಳನ್ನು ವಿತರಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.


ಉದಯವಾಹಿನಿ ಚಿತ್ರ

ಜಾತಿ ಮತ್ತು ಅದಾಯ ಪ್ರಮಾಣಪತ್ರಗಳನ್ನು ಉಚಿತವಾಗಿ ಸಾರ್ವಜನಿಕರ ಮನೆ ಬಾಗಿಲಿಗೆ ತೆರಳಿ ವಿತರಿಸುವ ಸಂದರ್ಭದಲ್ಲಿ ಕಡ್ಡಾಯವಾಗಿ ಫಲಾನುಭವಿಗಳ ಕುಟುಂಬದವರಿಗೆ ವಿತರಿಸಬೇಕಾಗಿದ್ದು, ಈ ಬಗ್ಗೆ ಜಿಪಿಎಸ್ ಫೋಟೋ ಸಹ ತೆಗೆದುಕೊಳ್ಳಬೇಕಾಗಿದ್ದು, ಯಾವುದೇ ಹಂತದಲ್ಲೂ ಕಾರ್ಯಕ್ರಮದ ಉದ್ದೇಶವು ವಿಫಲವಾಗದಂತೆ ಎಲ್ಲಾ ಮುನ್ನೆಚ್ಚರಿಕೆ ವಹಿಸಲಾಗಿದೆ. ಈ ಪ್ರಮಾಣ ಪತ್ರದಲ್ಲಿ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ-2026ರ ಕುರಿತು ಅರಿವು ಮೂಡಿಸುವ ಮಾಹಿತಿಯನ್ನೂ ಕೂಡ ಸಾರ್ವಜನಿಕರಿಗೆ ನೀಡಲಾಗುತ್ತಿದ್ದು, ಕರಡು ಮತದಾರರ ಪಟ್ಟಿ ಪ್ರಕಟವಾದ ನಂತರ, ಅಗತ್ಯವೆಂದು ಕಂಡುಬಂದಲ್ಲಿ ಭಾರತ ಚುನಾವಣಾ ಆಯೋಗ ಮತಗಟ್ಟೆ ಮಟ್ಟದ ಅಧಿಕಾರಿ ಮೂಲಕ ನೋಟಿಸ್ ನೀಡಿ ಹೆಚ್ಚುವರಿ ಮಾಹಿತಿಯನ್ನು ಕೇಳಬಹುದು. ಅಂತಹ ಸಂದರ್ಭದಲ್ಲಿ, ಚುನಾವಣಾ ಆಯೋಗವು ಸೂಚಿಸಿರುವ 11 ದಾಖಲೆಗಳಲ್ಲಿ ಯಾವುದಾದರೂ ಒಂದು ದಾಖಲೆಯನ್ನು ಅನ್ವಯಿಸುವಲ್ಲಿ ಜಾತಿ ಪ್ರಮಾಣ ಪತ್ರ ಸೇರಿದಂತೆ, ಇತರೆ ಅಗತ್ಯ ದಾಖಲೆಗಳನ್ನು ಸಲ್ಲಿಸುವ ಮೂಲಕ ತಮ್ಮ ಅರ್ಹತೆಯನ್ನು ದೃಢೀಕರಿಸಬಹುದು.

**ಮನೆ ಬಾಗಿಲಿಗೆ ತೆರಳಿ ವಿತರಿಸುವ ಗುರಿ**

ಬಾರ್‌ಕೋಡ್ ಸಹಿತವಾದ ಈ ಪ್ರಮಾಣಪತ್ರವನ್ನು ಅಧಿಕಾರಿಗಳು ಆನ್‌ಲೈನ್‌ನಲ್ಲಿ ಸಿಂಕ್ ಮಾಡಿದಾಗ ಪ್ರಮಾಣ ಪತ್ರ ವಿತರಣೆಯ ಸಂಖ್ಯೆಯು ಖಾತರಿಯಾಗಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

> ಜಿಲ್ಲೆಯಲ್ಲಿ ಜಾತಿ ಮತ್ತು ಅದಾಯ ಪ್ರಮಾಣ ಪತ್ರಗಳನ್ನು ಉಚಿತವಾಗಿ ಸಾರ್ವಜನಿಕರ ಮನೆ ಬಾಗಿಲಿಗೆ ತೆರಳಿ ವಿತರಿಸುವ ಕಾರ್ಯವು ಆರಂಭದಲ್ಲಿ ನಿಧಾನಗತಿಯಲ್ಲಿತ್ತು. ನಂತರ ಈ ಕಾರ್ಯಕ್ಕೆ ವಿಶೇಷ ಆದ್ಯತೆ ನೀಡಿ ಚುರುಕುಗೊಳಿಸಲಾಗಿದೆ. ಶೀಘ್ರದಲ್ಲೇ ಶೇ.100ರಷ್ಟು ವಿತರಣೆ ಮಾಡಲಾಗುವುದು'' ಎಂದು ತಿಳಿಸಿದರು.
> -ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ

### ಪ್ರವೇಶ ಪ್ರಕ್ರಿಯೆ

ವಿದ್ಯಾರ್ಥಿಗಳಿಗೆ ಪ್ರವೇಶ ಪ್ರಕ್ರಿಯೆ ಸಮಯದಲ್ಲಿ ಪ್ರಮಾಣಪತ್ರ ಸಿಗದೆ ಸ್ಕಾಲರ್‌ಶಿಪ್ ಅಥವಾ ಸೀಟು ಕಳೆದುಕೊಂಡ ಉದಾಹರಣೆಗಳಿದ್ದು, ಈ ಎಲ್ಲಾ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು, ಸರ್ಕಾರ ಈಗ ಪ್ರಕ್ರಿಯೆಯನ್ನೇ ತಿರುಗಿಸಿ, ಜನರ ಬಳಿಗೆ ಸೇವೆಯನ್ನು ತರುವ ನಿರ್ಧಾರ ಕೈಗೊಂಡಿದೆ ಅಧಿಕಾರಿಗಳು ತಿಳಿಸಿದ್ದಾರೆ.

ಈ ಮೊದಲು ಸಿಬ್ಬಂದಿ ಕೊರತೆ, ಸರ್ವರ್ ಸಮಸ್ಯೆ ಮುಂತಾದ ಕಾರಣಗಳಿಂದ ವಾರಗಟ್ಟಲೆ, ಕೆಲವೊಮ್ಮೆ ತಿಂಗಳುಗಟ್ಟಲೆ ವಿಳಂಬವಾಗುತ್ತಿತ್ತು. ಗ್ರಾಮೀಣ ಪ್ರದೇಶದ ಜನರಿಗೆ ತಾಲ್ಲೂಕು ಕೇಂದ್ರಕ್ಕೆ ಹೋಗಿ ಬರುವುದೇ ದೊಡ್ಡ ಸವಾಲಾಗಿತ್ತು. ಒಂದು ಪ್ರಮಾಣಪತ್ರಕ್ಕಾಗಿ ಎರಡು-ಮೂರು ಬಾರಿ ಅಲೆದಾಡಬೇಕಾದ ಪರಿಸ್ಥಿತಿ ಇತ್ತು.

# ಆಗಸ್ಟ್ 23ರೊಳಗೆ ಎಲ್‌ಪಿಜಿ ಇ-ಕೆವೈಸಿ ಪೂರ್ಣಗೊಳಿಸಲು ಅವಕಾಶ.

• **ಉದಯವಾಹಿನಿ ಮುದ್ದೇಬಿಹಾಳ:**

ತಾಲ್ಲೂಕಿನ ಎಲ್ಲಾ ಬಿಪಿಸಿಎಲ್, ಹೆಚ್‌ಪಿಸಿಎಲ್ ಹಾಗೂ ಐಓಸಿಎಲ್ ಎಲ್‌ಪಿಜಿ ಗ್ರಾಹಕರು ತಮ್ಮ ಬಾಕಿ ಇರುವ ಇ-ಕೆವೈಸಿ ಪ್ರಕ್ರಿಯೆಯನ್ನು 2026ರ ಆಗಸ್ಟ್ 23 ರ ಒಳಗಾಗಿ ಪೂರ್ಣಗೊಳಿಸಬೇಕೆಂದು ಶ್ರೀ ಸಾಯಿ ಇಂಡೇನ್ ಗ್ಯಾಸ್ ಸರ್ವಿಸ್ ಮ್ಯಾನೇಜರ್ ಆಫ್ರೀನ್ ಕೌಸರ್ ಮಕಾನದಾರ ವಿನಂತಿಸಿದ್ದಾರೆ.

ಈ ಹಿಂದೆ ಆಗಸ್ಟ್ 15ನ್ನು ಕೊನೆಯ ದಿನಾಂಕವಾಗಿ ನಿಗದಿಪಡಿಸಲಾಗಿತ್ತು. ಸಾರ್ವಜನಿಕರ ಅನುಕೂಲಕ್ಕಾಗಿ ಈಗ ಅದನ್ನು ಆಗಸ್ಟ್ 23ರವರೆಗೆ ವಿಸ್ತರಿಸಲಾಗಿದೆ. ಪ್ರಧಾನ್ ಮಂತ್ರಿ ಉಜ್ವಲ ಯೋಜನೆಯಡಿ ಆಧಾರ್ ಆಧಾರಿತ ಬಯೋಮೆಟ್ರಿಕ್ ಇ-ಕೆವೈಸಿಯನ್ನು ಮಾರ್ಚ್ 2026ರಿಂದಲೇ ಕಡ್ಡಾಯಗೊಳಿಸಲಾಗಿದೆ. ಈಗಾಗಲೇ ಇ-ಕೆವೈಸಿ ಪೂರ್ಣಗೊಳಿಸಿದ ಗ್ರಾಹಕರು ಮತ್ತೆ ಮಾಡಿಸುವ ಅಗತ್ಯವಿಲ್ಲ ಪ್ರಕ್ರಿಯೆ ಬಾಕಿ ಇರುವವರಿಗೆ ಮಾತ್ರ ಇದು ಅನ್ವಯಿಸುತ್ತದೆ.

**ಮನೆಯಲ್ಲಿಯೇ ಇ-ಕೆವೈಸಿ ಮಾಡುವ ವಿಧಾನ** ಇಂಡೇನ್ ಗ್ಯಾಸ್ ಗ್ರಾಹಕರು ಪ್ಲೇಸ್ಟೋರ್‌ನಿಂದ 'IndianOil One'ಮತ್ತು 'AadhaarFaceRD' ಆಪ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು, ತಮ್ಮ ಮೊಬೈಲ್‌ನಲ್ಲೇ 'ಫೇಸ್ ಬಯೋಮೆಟ್ರಿಕ್' ಮೂಲಕ ಇ-ಕೆವೈಸಿ ಸುಲಭವಾಗಿ ಪೂರ್ಣಗೊಳಿಸಬಹುದು. ಸುರಕ್ಷತೆಗೆ ಪೈಪ್‌ಲೈನ್ ಬದಲಾವಣೆ ಗ್ರಾಹಕರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು, ಹಳೆಯ ಗ್ಯಾಸ್ ಪೈಪ್‌ಲೈನ್‌ಬದಲಾಯಿಸಿ ಕೊಳ್ಳಲು ಕೂಡ ಅವಕಾಶ ಕಲ್ಪಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.



ಉದಯವಾಹಿನಿ ಚಿತ್ರ

# ಸಂಘಟನೆಯ ಬಲವರ್ಧನೆಗೆ ಎಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸುವಂತೆ ಕರೆ

• **ಉದಯವಾಹಿನಿ,ಚಿಂಚೋಳಿ**

ಸಂಘಟನೆಯ ಸದಸ್ಯತ್ವ ಅಭಿಯಾನ ಮಾಡಿ ಸಂಘಟನಾ ಸಮನ್ವಯತೆ ಹಾಗೂ ಗ್ರಾಮ ಮಟ್ಟದಿಂದ ತಾಲ್ಲೂಕು ಮಟ್ಟದವರೆಗೆ ಸಂಘಟನೆ ಬಲಪಡಿಸಿ ಬಲವರ್ದನೆಗೆ ಒಗ್ಗಟ್ಟಾಗಿ ಎಲ್ಲರೂ ಶ್ರಮಿಸಬೇಕು ಎಂದು ವಿಭಾಗೀಯ ಸಂಘಟನಾ ಸಂಚಾಲಕ ಗೋಪಾಲ ರಾಂಪುರೆ ಹೇಳಿದರು.

ಪಟ್ಟಣದ ಹೊರವಲಯದ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ,ಅಂಬೇಡ್ಕರ್‌ವಾದ,ಸಂಘಟನೆಯನ್ನು ಬಲಪಡಿಸುವ ಕುರಿತು ನಡೆದ ಮಹತ್ವದ ಸಭೆಯಲ್ಲಿ ಮಾತನಾಡಿದರು. ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರರವರ ಆದೇಶದಂತೆ ಹಾಗೂ ಜಿಲ್ಲಾ ಸಂಚಾಲಕ ಸಂಜೀವಕುಮಾರ ಜಾವಳಕರ್ ಅವರ ಮಾರ್ಗದರ್ಶನದಂತೆ ಸಭೆ ನಡೆಸಲಾಗುತ್ತಿದೆ.

ಸಂಘಟನೆಯ ಧ್ಯೇಯ ಬಡವರಿಗೆ ದಿನದಲಿತರಿಗೆ ಅನ್ಯಾಯವಾಗದಂತೆ ಹೋರಾಟ ರೂಪಿಸಿಕೊಳ್ಳುವುದು,ಸಮಾಜಕ್ಕೆ ಅನ್ಯಾಯವಾದಲ್ಲಿ ಹೋರಾಟ ಮೂಲಕ ನ್ಯಾಯ ದೊರಕಿಸಿಕೊಡುವುದು ಮತ್ತು ಜಿಲ್ಲಾ ಸಂಘಟನಾ ಸಂಚಾಲಕ ಮಾರುತಿ ಹುಳಗೋಳಕರ್ ಸೇರಿದಂತೆ ತಾಲ್ಲೂಕು ಪದಾಧಿಕಾರಿಗಳು ಭಾಗವಹಿಸಿದ್ದರು,ಸದಸ್ಯತ್ವ ಅಭಿಯಾನ,ಸಂಘಟನಾ ಸಮನ್ವಯತೆ ಕುರಿತು ಚರ್ಚೆ ಮಾಡಲಾಯಿತು ಎಂದರು.



ನೂತನ ತಾಲ್ಲೂಕು ಸಂಚಾಲಕರಾಗಿ ಮಾರುತಿ ಅಪ್ಪಣ್ಣೋರ ಅವರನ್ನು ಹಾಗೂ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ರೇವಣಸಿದ್ಧ ಹೊಡೆಬೀರನಳ್ಳಿ ಅವರಿಗೆ ನೇಮಕ ಮಾಡಲಾಯಿತು.

ತಾಲ್ಲೂಕು ವಿದ್ಯಾರ್ಥಿ ಒಕ್ಕೂಟ ಸಂಚಾಲಕ ಸಿದ್ದಲಿಂಗ ಮೇತ್ರಿ ಅವರನ್ನ ಮತ್ತು ಸಂಘಟನಾ ಸಂಚಾಲಕ ಶಿವಲಿಂಗ ಕೊಳ್ಳೂರ್,ರಮೇಶ ಕುಸರಂಪಳ್ಳಿ,ವಿಶಾಲ ಕಾನ್ಯಿ,ಶಿವರಾಜ ಬೇಡಕಪಳ್ಳಿ,ರಾಘವೇಂದ್ರ ಮೇತ್ರಿ, ಶ್ರೀಕಾಂತ ಕನಕಪೂರ,ರಾಘವೇಂದ್ರ ಮೇತ್ರಿ,ಹಾಗೂ ತಾಲ್ಲೂಕು ಸದಸ್ಯರಾಗಿ ಸಾಬಣ್ಣ ಸಾಲೆಬೀರನಳ್ಳಿ ಅವರನ್ನ ಆಯ್ಕೆ ಮಾಡಲಾಯಿತು.ಈ ಸಂದರ್ಭದಲ್ಲಿ ಹಣಮಂತ ಕುಡ್ಡಳ್ಳಿ ಸತೀಶ ಕುಮಾರ ಭಂಡಾರಿ,ನಾಗೇಶ ರಾಂಪೂರೇ,ರಾಜಕುಮಾರ ಕನಕಪೂರ ಇದ್ದರು.

# ಸೊಳ್ಳೆ ತಾಣಗಳ ನಾಶ ಮುಖ್ಯ ಗುರಿಯಾಗಲಿ ನೀರಿಕ್ಷಣಾಧಿಕಾರಿ ಮಹೇಶ ಡಿ. ಅಭಿಪ್ರಾಯ

• **ಉದಯವಾಹಿನಿ ಚಳ್ಳಕೆರೆ: (ಗೋಪನಹಳ್ಳಿ):**

ತಾಲ್ಲೂಕು ಶಿಕ್ಷಣ ಇಲಾಖೆ ಚಳ್ಳಕೆರೆ, ತಾಲ್ಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಚಳ್ಳಕೆರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ, ಗೋಪಾನಹಳ್ಳಿ ಇವರುಗಳ ಸಹಯೋಗದೊಂದಿಗೆ ಚಳ್ಳಕೆರೆ ತಾಲ್ಲೂಕಿನ ಹೊಟ್ಟಪ್ಪನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ವಿಶ್ವಸೊಳ್ಳೆ ದಿನ 20-8-2026 ರಂದು ಜರುಗಿತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಆರೋಗ್ಯ ನೀರಿಕ್ಷಣಾಧಿಕಾರಿ ಮಹೇಶ ಡಿ ಅವರು ವಿಶ್ವಸೊಳ್ಳೆ ದಿನವೆಂದರೆ ಆಚರಿಸುವ ಹಬ್ಬವಲ್ಲ ಇದು ಮಾಹಿತಿ ಶಿಕ್ಷಣ ನೀಡುವ ಮೂಲಕ ಕೀಟಜನ್ಯ ರೋಗಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವಾಗಿದೆ ಆಗಸ್ಟ್ 20 1897 ರಂದು ಡಾ. ರೋನಾಲ್ಡ್ ರಾಸ ಎಂಬ ವಿಜ್ಞಾನಿ ಯವರು ಮಲೇರಿಯಾ ರೋಗ ಹೆಣ್ಣು ಅನಾಫೀಲಿಸ್ ಸೊಳ್ಳೆಗಳಿಂದ ಹರಡುತ್ತದೆ ಎಂದು ಪತ್ತೆ ಹಚ್ಚಿದ ದಿನವಾದ್ದರಿಂದ ಆ ದಿನವನ್ನು ಪ್ರತಿ ವರ್ಷ ಆಗಸ್ಟ್ 20 ನೇ ತಾರೀಕಿನಂದು ಜಾಗೃತಿ ಮೂಡಿಸುವ ಸಲುವಾಗಿ ವಿಶ್ವಸೊಳ್ಳೆ ದಿನವೆಂದು ಮಾಹಿತಿ ಶಿಕ್ಷಣ, ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಹಮ್ಮಿಕೊಂಡು ನಡೆಸಲಾಗುತ್ತಿದೆ. ವಿದ್ಯಾರ್ಥಿಗಳು ಸೊಳ್ಳೆ ತಾಣಗಳ ನಾಶ ಮಾಡಲು ಮುಖ್ಯ ಗುರಿಯಾಗಸಿಕೊಳ್ಳಿ ಎಂದರು, ಕೀಟ ಚಿಕ್ಕದು ಕಾಟ ದೊಡ್ಡದು ಎಂಬಂತೆ ಈ ಸಣ್ಣ ಜೀವಿಗಳು ನಮ್ಮ ದೇಹಕ್ಕೆ ಎಂತಹಾ ಅಪಾಯವನ್ನು ಉಂಟು ಮಾಡುತ್ತವೆ ಎಂದರೆ ಮಲೇರಿಯಾ, ಚಿಕನ್ ಗುನ್ಯಾ, ಡೆಂಗ್ಯೂ ಜಿಕಾ ದಂತಹ ಮಾರಣಾಂತಿಕ ರೋಗವಾಹಕಗಳಾಗಿವೆ ಸೊಳ್ಳೆಗಳ ನಿಯಂತ್ರಣ ಮಾಡದಿದ್ದಲ್ಲಿ ದೊಡ್ಡ ಮಟ್ಟದ ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿ ಆರ್ಥಿಕ ಹೊರೆ ಉಂಟಾಗ ಬಹುದು ಎಂದರು. ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಲಕ್ಷ್ಮಿದೇವಿ ಮಾತನಾಡಿ ಸೊಳ್ಳೆಗಳ ನಿಯಂತ್ರಣದಲ್ಲಿ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಕೈ ಜೋಡಿಸಿ ಕೀಟಜನ್ಯ ರೋಗಗಳನ್ನು ನಿಯಂತ್ರಿಸಿ ಎಂದರು. ನಂತರ ಆರೋಗ್ಯ ನೀರಿಕ್ಷಣಾಧಿಕಾರಿ ಮಹೇಶ್ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಕಾರ್ಯಕ್ರಮದಲ್ಲಿ ಆರೋಗ್ಯ ನೀರಿಕ್ಷಣಾಧಿಕಾರಿ ಮಹೇಶ ಡಿ, ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಲಕ್ಷ್ಮಿದೇವಿ, ಸಮುದಾಯ ಆರೋಗ್ಯ ಅಧಿಕಾರಿ ಮಮತಾ, ಶಾಲೆಯ ಶಿಕ್ಷಕ ವೃಂದದವರು, ಅಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ವಿದ್ಯಾರ್ಥಿಗಳು ಇತರರು ಭಾಗವಹಿಸಿದ್ದರು.


ಉದಯವಾಹಿನಿ ಚಿತ್ರ

# ಜಾಗತಿಕ ಮಟ್ಟದ ರ‍್ಯಾಂಕಿಂಗ್‌ನಲ್ಲಿ ಮಾಹೆ ಮತ್ತಷ್ಟು ಪ್ರಗತಿ

• **ಉದಯವಾಹಿನಿ ಉಡುಪಿ**

ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಮಾಹೆ) ವಿಶ್ವವಿದ್ಯಾಲಯ ಎಂದು ಪರಿಗಣಿತವಾಗಿರುವ ಉತ್ಕೃಷ್ಟ ಸಂಸ್ಥೆಯು, ಜಾಗತಿಕ ಶೈಕ್ಷಣಿಕ ಮಟ್ಟದಲ್ಲಿ ಮತ್ತೊಂದು ಮೈಲುಗಲ್ಲು ತಲುಪಿದೆ.

ಶಾಂಘೈ ರ‍್ಯಾಂಕಿಂಗ್ ಕನ್ಸಲ್ಟೆನ್ಸಿಯ 2026ನೇ ಸಾಲಿನ ಪ್ರತಿಷ್ಠಿತ 'ಅಕಾಡೆಮಿಕ್ ರ‍್ಯಾಂಕಿಂಗ್ ಆಫ್ ವರ್ಲ್ಡ್ ಯೂನಿವರ್ಸಿಟೀಸ್ (ಎಆರ್‌ಡಬ್ಲ್ಯು) ಪಟ್ಟಿಯಲ್ಲಿ ಮಾಹೆ 701-800ರ ಶ್ರೇಣಿಗೆ ಏರಿದೆ. ಕಳೆದ ಬಾರಿ 801-900ರ ಶ್ರೇಣಿಯಲ್ಲಿದ್ದು ಇದೀಗ ಶೈಕ್ಷಣಿಕ ಹಾಗೂ ಸಂಶೋಧನಾ ವಲಯದ ತನ್ನ ನಿರಂತರ ಸಾಧನೆಯಿಂದಾಗಿ ವಿಶ್ವಮಟ್ಟದಲ್ಲಿ ತನ್ನ ಸ್ಥಾನದಲ್ಲಿ ಮತ್ತಷ್ಟು ಪ್ರಗತಿ ಕಂಡಿದೆ. ಎಆರ್‌ಡಬ್ಲ್ಯು ಟ್ರ್ಯಾಕರ್ ವಿಶ್ಲೇಷಣೆಯ ಪ್ರಕಾರ, ಮಾಹೆಯು ಜಾಗತಿಕವಾಗಿ 779ನೇ ಮತ್ತು ಭಾರತದಲ್ಲಿ 7ನೇ ಸ್ಥಾನದಲ್ಲಿದೆ. 2025ರ ರ‍್ಯಾಂಕಿಂಗ್‌ಗೆ ಹೋಲಿಸಿದರೆ, ಜಾಗತಿಕ ಮಟ್ಟದಲ್ಲಿ 36 ಹಾಗೂ ರಾಷ್ಟ್ರೀಯ ಮಟ್ಟದಲ್ಲಿ 3 ಸ್ಥಾನಗಳ ಮುನ್ನಡೆ ಸಾಧಿಸಿದೆ.

ಶೈಕ್ಷಣಿಕ ಗುಣಮಟ್ಟ, ಸಂಶೋಧನೆ ಹಾಗೂ ಹೊಸ ಆವಿಷ್ಕಾರಗಳಿಗೆ ಮಾಹೆ ನೀಡುತ್ತಿರುವ ಪ್ರಾಮುಖ್ಯಕ್ಕೆ ಈ ರ‍್ಯಾಂಕಿಂಗ್ ಕನ್ನಡಿಯಾಗಿದೆ. ಜ್ಞಾನದ ವಿಸ್ತರಣೆ ಹಾಗೂ ಸಮಾಜದ ಮೇಲೆ ಸಕಾರಾತ್ಮಕ ಪ್ರಭಾವ ಬೀರುವ ವಿಭಿನ್ನ ಸಂಶೋಧನೆಗಳಿಗೆ ವಿವಿ ನೀಡುತ್ತಿರುವ ಪ್ರೋತ್ಸಾಹವನ್ನು ಇದು ಮತ್ತೊಮ್ಮೆ ಸಾಬೀತುಪಡಿಸಿದೆ.

ಮಾಹೆ ಕುಲಪತಿ ಡಾ. ಶರತ್ ಕೆ. ರಾವ್ ಈ ಬಗ್ಗೆ ಮಾತನಾಡಿ, 'ಎಆರ್‌ಡಬ್ಲ್ಯು ರ‍್ಯಾಂಕಿಂಗ್‌ನಲ್ಲಿನ ಈ ಮುನ್ನಡೆ ನಮ್ಮ ಬೋಧಕರು, ವಿದ್ಯಾರ್ಥಿಗಳು, ಸಂಶೋಧಕರು ಹಾಗೂ ಸಿಬ್ಬಂದಿಯ ಶ್ರಮದ ಫಲವಾಗಿದೆ. ಶಿಕ್ಷಣ ಮತ್ತು ಸಂಶೋಧನೆಯ ಗುಣಮಟ್ಟವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲು ಇದು ನಮಗೆ ಪ್ರೇರಣೆ ನೀಡಿದೆ ಎಂದು ಹೇಳಿದರು.

# ಅರ್ಥಶಾಸ್ತ್ರ ಉಪನ್ಯಾಸರಿಗೆ ತರಬೇತಿ ಕಾರ್ಯಾಗಾರ, ಅರ್ಥಚೇತನ ಪುಸ್ತಕ ಉಪಯುಕ್ತವಾಗಿದೆ.

• **ಉದಯವಾಹಿನಿ ಗದಗ:**

ಅರ್ಥಚೇತನ ಪುಸ್ತಕದಿಂದಾಗಿ ಪ್ರತಿ ವರ್ಷದಿಂದ ವರ್ಷಕ್ಕೆ ಫಲಿತಾಂಶ ಹೆಚ್ಚುತ್ತಾ ಬಂದಿದ್ದು, ಇಂತಹ ಕಾರ್ಯಾಗಾರವು ಅನುಕೂಲವಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ (ಪಪೂ) ಉಪನಿರ್ದೇಶಕ ಎಸ್ ಬಿ ಮಸನಾಯಕ ಅಭಿಪ್ರಾಯಪಟ್ಟರು

ಅವರು ಗುರುವಾರ ನಗರದ ಎಸ್ ಎ ವಿಜ್ಞಾನ ಪಪೂ ಮಹಾವಿದ್ಯಾಲಯ ಜರುಗಿದ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಉಪನಿರ್ದೇಶಕರ ಕಚೇರಿ ಹಾಗೂ ಶಾಲಾಶಿಕ್ಷಣ ಇಲಾಖೆ (ಪಪೂ) ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಅರ್ಥಶಾಸ್ತ್ರ ವಿಷಯದ ಉಪನ್ಯಾಸಕರಿಗೆ ಒಂದು ದಿನದ ಪುನಶ್ಚೇತನ ತರಬೇತಿ ಕಾರ್ಯಾಗಾರ ಹಾಗೂ ಸಾಧಕರಿಗೆ ಮತ್ತು ನಿವೃತ್ತರಿಗೆ ಸನ್ಮಾನ ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ, ಮಾತನಾಡಿದರು.

ಮಾದರಿಯ ಪ್ರಶ್ನೆ ಪತ್ರಿಕೆ, ಇಂತಹ ಕಾರ್ಯಾಗಾರ ಹಾಗೂ ಅರ್ಥಚೇತನ ಪುಸ್ತಕ ಮೂಲಕ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆಯ ಫಲಿತಾಂಶ ಹೆಚ್ಚಿಸಲು ತುಂಬಾ ಅನುಕೂಲವಾಗಿದೆ. ವಿದ್ಯಾರ್ಥಿಗಳು ಸದೂಪಯೋಗ ಮಾಡಿಕೊಳ್ಳಬೇಕೆಂದು ಹೇಳಿದರು.


ಉದಯವಾಹಿನಿ ಚಿತ್ರ

ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ಕೇಂದ್ರದ ಅಧ್ಯಕ್ಷ ಎಸ್.ಎಸ್. ಪಟ್ಟಣಶೆಟ್ಟಿ ಶಿಕ್ಷಣ ವ್ಯವಸ್ಥೆಯಲ್ಲಿ ಇತ್ತಿಚಿನ ದಿನಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಅರ್ಥಶಾಸ್ತ್ರ ವಿಷಯ ಉಳಿದ ಎಲ್ಲಾ ವಿಷಯಗಳಿಗಿಂತ ಭಿನ್ನವಾಗಿದೆ ಜೊತೆಗೆ ಕಠಿಣವಾಗಿದೆ. ಜಗತ್ತು ಸಂಪೂರ್ಣವಾಗಿ ಅರ್ಥಶಾಸ್ತ್ರದ ಮೇಲೆ ನಿಂತಿದೆ ಎಂದು ಹೇಳಿದರು.

ಆರ್ಥಿಕ ಕಾರಣಗಳಿಂದಾಗಿ ಇಚೆಗೆ ಜಗತ್ತಿನಲ್ಲಿ ಆಗುತ್ತಿರುವ ಬದಲಾವಣೆ ಕುರಿತು ಮಾತನಾಡಿದ ಅವರು ಅರ್ಥಚೇತನ ಪುಸ್ತಕ, ಈ ಸಂಶೋಧನಾ ಕೇಂದ್ರ ನಡೆಸಿಕೊಂಡು ಬಂದ ಕಾರ್ಯಕ್ರಮಗಳ ಬಗೆಗೆ ತಿಳಿಸಿ, ತಮ್ಮ ಅನುಭವಗಳನ್ನು ವೇದಿಕೆಯಲ್ಲಿ ಹಂಚಿಕೊಂಡರು.

ನಿವೃತ್ತ ಪ್ರಾ ವಿ.ಎಸ್ ದಲಾಲಿ, ಪ್ರಾ. ಎಸ್.ಎಸ್. ಸೋಮನಗೌಡ್ರ ಮಾತನಾಡಿ ನಮ್ಮ ಜವಾಬ್ದಾರಿಗಳನ್ನು ಮರೆಯಬಾರದು. ಇಂತಹ ಕಾರ್ಯಾಗಳು ನಿರಂತರವಾಗಿ ನಡೆಯಬೇಕು. ಶೇ ನೂರಕ್ಕೆ ನೂರರಷ್ಟು ಫಲಿತಾಂಶ ಮಾಡುವ ನಿಟ್ಟಿನಲ್ಲಿ 2008 ರಿಂದ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸಂಶೋಧನಾ ಕೇಂದ್ರ ನಡೆದು ಬಂದದಾರಿ ತಿಳಿಸಿದ ಅವರು ಫಲಿತಾಂಶ ಸುಧಾರಣೆ ಕುರಿತಂತೆ ಉತ್ತಮ ವಿಚಾರಗಳನ್ನು ಹಂಚಿಕೊಂಡರು. ಸಮಾರಂಭದಲ್ಲಿ ಅರ್ಥಶಾಸ್ತ್ರ ವಿಷಯದಲ್ಲಿ ಅತಿ ಹೆಚ್ಚು ಅಂಕಪಡೆದು ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ, ಸಾಧಕರಿಗೆ ಹಾಗೂ ನಿವೃತ್ತರಿಗೆ ಸನ್ಮಾನಿಸಲಾಯಿತು. ಮುಖ್ಯ ಅತಿಥಿಗಳಾಗಿ ಹಚ್.ಎಸ್. ಕಿಂದ್ರಿ, ವಾಯ್.ಸಿ. ಪಾಟೀಲ, ಬಿ.ಎಸ್. ಮಲ್ಲಾಪೂರ, ಸೇರಿದಂತೆ ಪಪೂ ಕಾಲೇಜಗಳ ಉಪನ್ಯಾಸಕರ ಸಂಘದ ಪದಾಧಿಕಾರಿಗಳು ಹಾಗೂ ಮುಂತಾದವರು ಉಪಸ್ಥಿತರಿದ್ದರು.

# ಉಕ್ಕಿ ಹರಿದ ಹೊಳೆಗೆ ಧುಮುಕಿ ವಿದ್ಯುತ್ ಮರು ಸಂಪರ್ಕ; ಪವರ್‌ಮ್ಯಾನ್‌ಗಳು!

## ತುಂಬಿ ಹರಿಯುತ್ತಿದ್ದ ಹೊಳೆಯಲ್ಲಿಯೇ ಮೆಸ್ಕಾಂ ಪವರ್‌ಮ್ಯಾನ್‌ಗಳು ತಂತಿ ಮರುಜೋಡಣೆ ಮಾಡಿದ್ದಾರೆ

• **ಉದಯವಾಹಿನಿ,** ಪುತ್ತೂರು:

ನಿರಂತರ ಮಳೆಯಿಂದ ಹೊಳೆ ಉಕ್ಕಿ ಹರಿಯುತ್ತಿದ್ದರೂ ಕರ್ತವ್ಯಕ್ಕೆ ಅಡ್ಡಿಯಾಗದಂತೆ ಜೀವದ ಹಂಗು ತೊರೆದು ಹೊಳೆಗೆ ಧುಮುಕಿ ವಿದ್ಯುತ್ ಸಂಪರ್ಕ ಮರುಸ್ಥಾಪಿಸಿದ ಮೆಸ್ಕಾಂ ಪವರ್ ಮ್ಯಾನ್‌ಗಳ ಸಾಹಸ ವ್ಯಾಪಕ ಪ್ರಶಂಸೆಗೆ ಪಾತ್ರವಾಗಿದೆ.

ಪುತ್ತೂರು ತಾಲೂಕಿನ ಬೆಟ್ಟಂಪಾಡಿ ಗ್ರಾಮದ ದೂಮಡ್ಕದಲ್ಲಿ ಈ ಸಾಹಸಿ ಕಾರ್ಯಾಚರಣೆ ನಡೆದಿದೆ. ಮೆಸ್ಕಾಂನ ಪವರ್‌ಮ್ಯಾನ್‌ಗಳಾದ ಬಂದೇ ನವಾಜ್, ಪ್ರವೀಣ್ ಹಾಗೂ ಬಸವರಾಜ್ ಅವರು ಸ್ಥಳೀಯ ಜಾನು ನಾಯ್ಕ ಹಾಗೂ ಅವರ ಕುಟುಂಬದವರ ಮತ್ತು ಊರವರ ಸಹಕಾರದೊಂದಿಗೆ ಅಪಾಯಕಾರಿ ಪರಿಸ್ಥಿತಿಯಲ್ಲಿಯೇ ವಿದ್ಯುತ್ ಸಂಪರ್ಕ ಪುನರ್ ಕಲ್ಪಿಸಿದ್ದಾರೆ.

**1 : ಬದಿಯಲ್ಲಿ ಸುಮಾರು 12 ಮನೆಗಳಿದ್ದು**
**2 : ವಿದ್ಯುತ್ ಲೈನ್ ಮೇಲೆ ಉರುಳಿ ಬಿದ್ದಿತ್ತು**
**3 : ತಂತಿಗಳು ತುಂಡಾಗಿ ಹೊಳೆಗೆ ಬಿದ್ದಿದ್ದವು**

ದೂಮಡ್ಕ ಭಾಗದಲ್ಲಿ ಹೊಳೆಯ ಬದಿಯಲ್ಲಿ ಸುಮಾರು 12 ಮನೆಗಳಿದ್ದು, ಹೊಳೆಯ ಇನ್ನೊಂದು ಬದಿಯಿಂದ ಎಲ್‌ಟಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ನಿರಂತರ ಮಳೆಯಿಂದ ಸೀರೆ ಹೊಳೆ ತುಂಬಿ ಹರಿಯುತ್ತಿದ್ದು, ಹೊಳೆಯ ದಡದಲ್ಲಿದ್ದ ಈಚಲು ಮರವೊಂದು ವಿದ್ಯುತ್ ಲೈನ್ ಮೇಲೆ ಉರುಳಿ ಬಿದ್ದಿತ್ತು. ಪರಿಣಾಮ, ನಾಲ್ಕು ತಂತಿಗಳ ಪೈಕಿ ಎರಡು ತಂತಿಗಳು ತುಂಡಾಗಿ ಹೊಳೆಗೆ ಬಿದ್ದಿದ್ದವು.


ಉದಯವಾಹಿನಿ ಚಿತ್ರ

> ನೀರಿನ ಸೆಳೆತ ಹಾಗೂ ಮಳೆ ನಡುವೆಯೇ ಸಿಬ್ಬಂದಿ ತಂತಿಯನ್ನು ನಿಗದಿತ ಸ್ಥಳಕ್ಕೆ ತಲುಪಿಸಿ ಮರುಜೋಡಣೆ ಕಾರ್ಯ ಪೂರ್ಣಗೊಳಿಸಿದರು. ಕಾರ್ಯಾಚರಣೆಯ ಸಂದರ್ಭದಲ್ಲಿ ಸ್ಥಳದಲ್ಲಿದ್ದ ಮೆಸ್ಕಾಂ ಬೆಟ್ಟಂಪಾಡಿ ಶಾಖೆಯ ಕಿರಿಯ ಅವರು ಸಿಬ್ಬಂದಿಗೆ ಮಾರ್ಗದರ್ಶನ ನೀಡಿದರು.
> -ಇಂಜಿನಿಯರ್ ಪುತ್ತು ಜೆ

ವಿದ್ಯುತ್ ತಂತಿ ನೀರಿನ ರಭಸಕ್ಕೆ ಕೊಚ್ಚಿ ಹೋಗದಂತೆ ಸ್ಥಳೀಯರಾದ ಜಾನು ನಾಯ್ಕ ಹಾಗೂ ಇತರರು ಅದನ್ನು ಮರಕ್ಕೆ ಕಟ್ಟಿ ಸುರಕ್ಷಿತವಾಗಿರಿಸಿದ್ದರು. ಆದರೆ ವಿದ್ಯುತ್ ಸಂಪರ್ಕ ಕಡಿತ ಗೊಂಡಿದ್ದರಿಂದ 12 ಮನೆಗಳ ನಿವಾಸಿಗಳು ಕತ್ತಲಲ್ಲೇ ಉಳಿಯುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದನ್ನು ಮನಗಂಡು, ತುಂಬಿ ಹರಿಯುತ್ತಿದ್ದ ಹೊಳೆಯಲ್ಲಿಯೇ ತಂತಿ ಮರುಜೋಡಣೆ ಮಾಡುವ ಸಾಹಸಕ್ಕೆ ಮೆಸ್ಕಾಂ ಸಿಬ್ಬಂದಿ ಮುಂದಾದರು.

> ನಮ್ಮ ಸಿಬ್ಬಂದಿಯ ಕರ್ತವ್ಯ ನಿಷ್ಠೆ ಮತ್ತು ಧೈರ್ಯ ಹೆಮ್ಮೆ ತರುವಂತಿದೆ. ಪ್ರತಿಕೂಲ ಪರಿಸ್ಥಿತಿಯಲ್ಲೂ ಸಾರ್ವಜನಿಕರ ವಿದ್ಯುತ್ ಸಮಸ್ಯೆ ಪರಿಹರಿಸಲು ಅವರು ತೋರಿದ ಬದ್ಧತೆ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.
> -ಹಿರಿಯ ಅಧಿಕಾರಿಗಳು

ಮೆಸ್ಕಾಂನ ಪವರ್‌ಮ್ಯಾನ್‌ಗಳಾದ ಬಂದೇ ನವಾಜ್, ಪ್ರವೀಣ್ ಹಾಗೂ ಸ್ಥಳೀಯರೊಬ್ಬರು ಹೊಳೆಗೆ ಇಳಿದು, ವಿದ್ಯುತ್ ತಂತಿ ಮತ್ತು ಅದಕ್ಕೆ ಕಟ್ಟಿದ್ದ ಹಗ್ಗವನ್ನು ಹಿಡಿದುಕೊಂಡು ನೀರಿನ ರಭಸದಲ್ಲೇ ಈಜುತ್ತಾ ಎದುರು ದಡದತ್ತ ಸಾಗಿದರು. ದಡದಲ್ಲಿದ್ದ ಬಸವರಾಜ್ ಹಾಗೂ ಇತರರು ತಂತಿಯನ್ನು ಒದಗಿಸುವ ಕಾರ್ಯದಲ್ಲಿ ಸಹಕರಿಸಿದರು.

### ಮಳೆಗಾಲದ ಅಪಾಯಕಾರಿ ಪರಿಸ್ಥಿತಿ

ಪವರ್‌ಮ್ಯಾನ್‌ಗಳ ಈ ಸಾಹಸಿಕ ಕಾರ್ಯಾಚರಣೆಯ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಸಾರ್ವಜನಿಕರಿಂದಲೂ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಮಳೆಗಾಲದ ಅಪಾಯಕಾರಿ ಪರಿಸ್ಥಿತಿಯಲ್ಲೂ ಜನರ ಮನೆಗಳಿಗೆ ಬೆಳಕು ಮರಳಿಸಲು ಹೊಳೆಗೆ ಧುಮುಕಿದ ಮೆಸ್ಕಾಂ ಸಿಬ್ಬಂದಿಯ ಕಾರ್ಯಾಚರಣೆ ಕರ್ತವ್ಯನಿಷ್ಠೆಗೆ ಉತ್ತಮ ನಿದರ್ಶನವಾಗಿದೆ.

ಈಟಿವಿ ಭಾರತದ ಜೊತೆಗೆ ಮಾತನಾಡಿದ ಮೆಸ್ಕಾಂ ಸಿಬ್ಬಂದಿ ಬಂದೇ ನವಾಜ್, ಮಳೆಗಾಲದಲ್ಲಿ ಹೊಳೆ ತುಂಬಿ ಹರಿಯುತ್ತಿರುವ ಸಂದರ್ಭದಲ್ಲಿ ತಂತಿ ಮರುಜೋಡಣೆ ಮಾಡುವುದು ಅತ್ಯಂತ ಕಷ್ಟದ ಕೆಲಸ. ಸಂಪರ್ಕ ಕಲ್ಪಿಸದಿದ್ದರೆ ಈ ಭಾಗದ ಅಷ್ಟೂ ಮನೆಗಳು ಕತ್ತಲಲ್ಲೇ ಉಳಿಯಬೇಕಾಗಿತ್ತು. ನಾವು ಧೈರ್ಯದಿಂದ ಕಾರ್ಯಾಚರಣೆ ಮಾಡಿ ವಿದ್ಯುತ್ ಸಂಪರ್ಕ ಪುನರ್ ಕಲ್ಪಿಸಿದ್ದೇವೆ. ಇದು ನಮ್ಮ ಕರ್ತವ್ಯ. ಎಲ್ಲಕ್ಕಿಂತ ಮಿಗಿಲಾಗಿ ನಮಗೆ ಹಿರಿಯ ಅಧಿಕಾರಿಗಳ ಬೆಂಬಲ ಮತ್ತೆ ಊರವರ ಸಹಕಾರ ಲಭ್ಯವಾಗಿತ್ತು. ವಿದ್ಯುತ್ ಸಮಸ್ಯೆ ಉಂಟಾಗುವ ಸಮಯದಲ್ಲಿ ನಮ್ಮಂಥವರಿಗೆ ಊರಿನ ಜನರ ಸಹಕಾರ ಬಹಳ ಮುಖ್ಯವಾಗಿ ಬೇಕಾಗುತ್ತದೆ. ಇದು ನಮಗೆ ಕೆಲಸ ಮಾಡಲು ಸ್ಫೂರ್ತಿ ನೀಡುತ್ತದೆ ಎಂದು ಹೇಳಿದರು.

# ಅರಸುರವರ ಆದರ್ಶಗಳು ಇಂದಿಗೂ ಪ್ರಸ್ತುತವಾಗಿವೆ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬಸವನಬಾಗೇವಾಡಿ:**

ಡಿ ದೇವರಾಜ ಅರಸುರವರ ಆದರ್ಶಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಶಿಕ್ಷಕ ಸಾಹಿತಿ ಅಶೋಕ ಹಂಚಲಿ ಅಭಿಪ್ರಾಯಪಟ್ಟರು.

ಅವರು ಗುರುವಾರ ಪಟ್ಟಣದಲ್ಲಿ ತಾಲ್ಲೂಕ ಆಡಳಿತ, ತಾಲೂಕ ಪಂಚಾಯತ್, ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಹಯೋಗದಲ್ಲಿ ರಾಜ್ಯದ ಮಾಜಿ ಮುಖ್ಯಮಂತ್ರಿ ದಿ. ಶ್ರೀ ಡಿ ದೇವರಾಜ ಅರಸುರವರ 111ನೇ ಜನ್ಮ ದಿನಾಚರಣೆ ಸಮಾರಂಭದಲ್ಲಿ ಉಪನ್ಯಾಸ ನೀಡಿದ ಅವರು, ಸಾಮಾಜಿಕ ನ್ಯಾಯದ ಹರಿಕಾರ ಹಿಂದುಳಿದ ವರ್ಗಗಳ ಮುಖ್ಯಮಂತ್ರಿ ಎಂದು ಹೆಸರಾದ ಅರಸುರವರು, ಕರ್ನಾಟಕದಲ್ಲಿ ಸಾಮಾಜಿಕ ನ್ಯಾಯಕ್ಕೆ ಹೊಸ ಅರ್ಥ ಕೊಟ್ಟರು.

ಭೂ ಸುಧಾರಣಾ ಕಾಯ್ದೆ ಭೂಮಿ ಉಳುವವನಿಗೆ ಎಂಬ ತತ್ವದಡಿ ಜೀತ ಪದ್ಧತಿ ರದ್ದು ಮಾಡಿ, ರೈತರಿಗೆ ಭೂಮಿ ಒಡೆತನ ಕೊಡಿಸಿದರು ಎಂದರು. ತಹಶೀಲ್ದಾರ್ ವಾಯ್.ಎಸ್ ಸೋಮನಕಟ್ಟಿ ಮಾತನಾಡಿ, ಗ್ರಾಮೀಣ ಪ್ರದೇಶಗಳಿಗೆ ಹೆಚ್ಚಿನ ಅಧಿಕಾರ ಮತ್ತು ಅನುದಾನ ನೀಡಿ, ಸ್ಥಳೀಯ ಆಡಳಿತವನ್ನು ಬಲಗೊಳಿಸಿದರು.

ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ವಸತಿ ನಿಲಯಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಿದರು.ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಉತ್ತೇಜನ ನೀಡಿ, ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸೃಷ್ಟಿಸಿದರು. ಸರಳತೆ, ಪ್ರಾಮಾಣಿಕತೆ ಮತ್ತು ಬಡವರ ಪರ ನಿಲುವಿನಿಂದಾಗಿ ಅವರು ಇಂದಿಗೂ ಕರ್ನಾಟಕದ ಕನ್ನಡಿಗರ ಮುಖ್ಯಮಂತ್ರಿ ಎಂದು ಜನಮನದಲ್ಲಿ ಉಳಿದಿದ್ದಾರೆ ಎಂದರು.

ತಾಲ್ಲೂಕಾ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಮೈಬೂಬ್ ಲಾ.ನಾಯ್ಕೋಡಿ ಮಾತನಾಡಿ, ಬಸವ ತತ್ವ ಆಧಾರಿತ ಅಧಿಕಾರ ನಡೆಸಿದ ಅವರು ಸಮ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸಿದವರು. ಸರ್ವರೂ ಸುಮಾನರು ಎಂಬ ತತ್ವ ಅವರದಾಗಿತ್ತು ಎಂದರು. ಪ್ರಸ್ತಾವಿಕವಾಗಿ ವಿಸ್ತರಣಾಧಿಕಾರಿ ಸಿ ಜಿ ಬಿರಾದಾರ ಮಾತನಾಡಿದರು.

**ಸನ್ಮಾನ :**ಹಿಂದುಳಿದ ಇಲಾಖೆಯ ವಸತಿ ನಿಲಯಗಳಲ್ಲಿ ಅತ್ಯುತ್ತಮ ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ವೇದಿಕೆಯ ಮೇಲೆ ತಾಪಂ ಇಓ ವೆಂಕಟೇಶ ವಂದಾಲ, ತಾಲ್ಲೂಕ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಎಸ್.ಸಿ ಕುಂಟೋಜಿ ಹಾಜರಿದ್ದರು. ಜಿ. ಎಮ್ ಗಂಜಾಳ ನಿರೂಪಿಸಿ ವಂದಿಸಿದರು. **ಭವ್ಯ ಮೆರವಣಿಗೆ :**ಕಾರ್ಯಕ್ರಮ ಮುನ್ನ ಅರಸು ಅವರ ಭಾವಚಿತ್ರದ ಮೆರವಣಿಗೆಯು ಪಟ್ಟಣದ ಪ್ರಮುಖ ಬೀದಿಗಳಲ್ಲಿ ನಡೆಯಿತು.

> ಎಸ್ ಬಂಗಾರಪ್ಪ,ವೀರಪ್ಪ ಮೊಯ್ಲಿ ಸೇರಿದಂತೆ ನಾನಾ ನಾಯಕರಲ್ಲಿ ಶಕ್ತಿ ತುಂಬಿದ ಧೀಮಂತ ನಾಯಕ ಅರಸುರವರು.
> - ಅಶೋಕ ಹಂಚಲಿ, ಶಿಕ್ಷಕ ಸಾಹಿತಿ

# ಖಾಸಗಿ ಬಸ್ಸಿನಲ್ಲಿ ಬೆಂಕಿ; ಸಮಯಪ್ರಜ್ಞೆಯಿಂದ 7 ಪ್ರಯಾಣಿಕರು ಪಾರು

• **ಉದಯವಾಹಿನಿ ಬ್ರಹ್ಮಾವರ**

ಉಡುಪಿ ಜಿಲ್ಲೆಯ ಬ್ರಹ್ಮಾವರ ಸಮೀಪ ರಾಷ್ಟ್ರೀಯ ಹೆದ್ದಾರಿಯಲ್ಲಿ ಗುರುವಾರ ಬೆಳಿಗ್ಗೆ ಖಾಸಗಿ ಬಸ್ಸೊಂದು ಬೆಂಕಿಗಾಹುತಿಯಾದ ಘಟನೆ ನಡೆದಿದೆ. ಅದೃಷ್ಟವಶಾತ್ ಬಸ್ಸಿನಲ್ಲಿದ್ದ ಏಳು ಮಂದಿ ಪ್ರಯಾಣಿಕರು ಯಾವುದೇ ಗಾಯಗಳಿಲ್ಲದೆ ಸುರಕ್ಷಿತವಾಗಿ ಪಾರಾಗಿದ್ದಾರೆ.

ಉಡುಪಿಯಿಂದ ಸಾಗರಕ್ಕೆ ತೆರಳುತ್ತಿದ್ದ ಖಾಸಗಿ ಬಸ್ಸಿನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದೆ. ಈ ವೇಳೆ ನಿರ್ವಾಹಕರು ಸಮಯಪ್ರಜ್ಞೆ ಮೆರೆದು ಪ್ರಯಾಣಿಕರನ್ನು ಕೂಡಲೇ ಕೆಳಗಿಳಿಸಿದ್ದಾರೆ. ಇದರಿಂದಾಗಿ ಭಾರಿ ಅನಾಹುತವೊಂದು ತಪ್ಪಿದ್ದು, ಎಲ್ಲಾ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬಸ್ಸಿನ ಎಡಿಸಿ ಬಾಕ್ಸ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎನ್ನುವುದು ಪ್ರಾಥಮಿಕ ಮಾಹಿತಿಯಿಂದ ತಿಳಿದುಬಂದಿದೆ. ಘಟನೆ ಕುರಿತು ಮಾಹಿತಿ ಲಭಿಸಿದ ತಕ್ಷಣವೇ ಉಡುಪಿ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

# ಧರ್ಮಸ್ಥಳದಲ್ಲಿ ರಾಜ್ಯ ಭಜನಾ ಪರಿಷತ್ ಸಭೆ

• **ಉದಯವಾಹಿನಿ ಧರ್ಮಸ್ಥಳ:**

ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥೇಶ್ವರ ಭಜನಾ ಪರಿಷತ್‌ನ ನೇತೃತ್ವದಲ್ಲಿ ನಡೆಯಲಿರುವ 28ನೇ ವರ್ಷದ ಭಜನಾ ಕಮ್ಮಟದ ಪೂರ್ವಭಾವಿ ಸಭೆಯು ಧರ್ಮಸ್ಥಳದ ಅನ್ನಪೂರ್ಣ ಛತ್ರದ ಸಭಾಂಗಣದಲ್ಲಿ ನಡೆಯಿತು. ಸುಳ್ಯ ವಲಯ ಪರಿಷತ್ ಅಧ್ಯಕ್ಷೆ ಶ್ರೀಮತಿ ಸವಿತಾ ಸಂದೇಶ್ ಪ್ರಾರ್ಥನೆ ನೆರವೇರಿಸಿದರು.

ಸೆಪ್ಟೆಂಬರ್ 28ರಿಂದ ಅಕ್ಟೋಬರ್ 4ರವರೆಗೆ ನಡೆಯಲಿರುವ ಭಜನಾ ಕಮ್ಮಟದ ವಿವಿಧ ಕಾರ್ಯಕ್ರಮಗಳ ಕುರಿತು ಭಜನಾ ಪರಿಷತ್ ರಾಜ್ಯ ಸಂಚಾಲಕ ಶ್ರೀ ಜಿ. ಸುಬ್ರಹ್ಮಣ್ಯ ಪ್ರಸಾದ್ ಅವರು ಮಾಹಿತಿ ನೀಡಿದರು. ರಾಜ್ಯದಾದ್ಯಂತ ಭಜನಾ ಪರಿಷತ್‌ನ ಪದಾಧಿಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಅಭಿನಂದಿಸಿದ ಅವರು, ಕಮ್ಮಟದ ಸಂಪೂರ್ಣ ರೂಪುರೇಷೆ ಹಾಗೂ ಕಾರ್ಯಕ್ರಮಗಳ ವಿವರವನ್ನು ತಿಳಿಸಿದರು.

ಪೂಜ್ಯ ಖಾವಂದರ ಆಪ್ತ ಕಾರ್ಯದರ್ಶಿ ಶ್ರೀ ಎ. ವೀರು ಶೆಟ್ಟಿ ಅವರು ಮಾತನಾಡಿ, ರಾಜ್ಯದಾದ್ಯಂತ ಭಜನಾ ಪರಿಷತ್ ನಡೆಸುತ್ತಿರುವ ಉತ್ತಮ ಕಾರ್ಯಚಟುವಟಿಕೆಗಳು ಹಾಗೂ ಪದಾಧಿಕಾರಿಗಳ ಸಕ್ರಿಯ ಪಾಲ್ಗೊಳ್ಳುವಿಕೆಗೆ ಕ್ಷೇತ್ರದ ಪರವಾಗಿ ಅಭಿನಂದನೆ ಸಲ್ಲಿಸಿದರು.

# ಬರಪೀಡಿತ ಜಿಲ್ಲೆ ಘೋಷಣೆಗೆ ಆಗ್ರಹಿಸಿ ''ಕಲಬುರಗಿ ಬಂದ್''

• **ಉದಯವಾಹಿನಿ ಕಲಬುರಗಿ,**

ಕಲಬುರಗಿಯನ್ನು ಬರಪೀಡಿತ ಜಿಲ್ಲೆ ಎಂದು ಘೋಷಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಂಯುಕ್ತ-ಹೋರಾಟ ಕರ್ನಾಟಕ ಸಂಘಟನೆ ನೇತೃತ್ವದಲ್ಲಿ ಇಂದು ಕರೆ ನೀಡಿದ್ದ ''ಕಲಬುರಗಿ ಬಂದ್''ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಬೆಳಿಗ್ಗೆ ನಗರದ ಕೇಂದ್ರ ಬಸ್ ನಿಲ್ದಾಣದ ಎದುರು ಜಮಾಯಿಸಿದ ವಿವಿಧ ಸಂಘಟನೆಗಳ ಮುಖಂಡರು ಬಸ್ ಸಂಚಾರ ತಡೆದು ಪ್ರತಿಭಟನೆ ನಡೆಸಿದರು. ಇದರಿಂದ ಬಸ್ ಸಂಚಾರದಲ್ಲಿ ವ್ಯತ್ಯಯ ಉಂಟಾಗಿ ಪ್ರಯಾಣಿಕರು ಪರದಾಡುವಂತಾಯಿತು. ಪ್ರತಿಭಟನೆ ಹಿನ್ನೆಲೆಯಲ್ಲಿ ಬಸ್ ಸಂಚಾರ ಸ್ಥಗಿತೊಳಿಸಿದ್ದರಿಂದ ಬಸ್‌ಗಳು ಮತ್ತು ಪ್ರಯಾಣಿಕರಿಲ್ಲದೆ ಕೇಂದ್ರ ಬಸ್ ನಿಲ್ದಾಣ ಭಣಗುಡುತ್ತಲಿತ್ತು. ನಗರದ ಗಂಜ್ ಪ್ರದೇಶದಲ್ಲೂ ರೈತರು ಬಸ್ ಸಂಚಾರ ತಡೆದು ಪ್ರತಿಭಟನೆ ನಡೆಸಿದರು. ಬಂದ್ ಹಿನ್ನೆಲೆಯಲ್ಲಿ ಗಂಜ್ ಪ್ರದೇಶದಲ್ಲಿನ ಅಂಗಡಿ ಮುಂಗಟ್ಟುಗಳು ಸಂಪೂರ್ಣ ಬಂದ್ ಆಗಿದ್ದವು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ** ನಿಮ್ಮ ಊಹೆಗಳು ಲಾಭ ತರುತ್ತವೆ. ನೀವು ಅಪರೂಪಕ್ಕೆ ಭೇಟಿ ಮಾಡುವ ಜನರನ್ನು ಸಂಪರ್ಕಿಸಲು ಒಳ್ಳೆಯ ದಿನ. ಸ್ನೇಹ ಕಳೆದುಕೊಳ್ಳುವ ಸಾಧ್ಯತೆಗಳು ಇಂದು ಹೆಚ್ಚಾಗಿರುವುದರಿಂದ ಎಚ್ಚರಿಕೆಯಿಂದಿರಿ. ಜನರು ನಿಮ್ಮ ಕೆಲಸದಲ್ಲಿನ ಪ್ರಯತ್ನಗಳಿಗೆ ನಿಮ್ಮನ್ನು ಗುರುತಿಸುತ್ತಾರೆ.

**ವೃಷಭ** ಆಕರ್ಷಕವಾದ ಮತ್ತು ನಿಮ್ಮನ್ನು ಶಾಂತವಾಗಿರಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ. ಇಂದು ಮನೆಯಿಂದ ಹೊರಗೆ ಹಿರಿಯರ ಆಶೀರ್ವಾದವನ್ನು ತೆಗೆದುಕೊಂಡು ಹೋಗಿ, ಇದರಿಂದ ನೀವು ಹಣದ ಲಾಭವನ್ನು ಪಡೆಯಬಹುದು. ಹತ್ತಿರದ ಗೆಳೆಯರು ಹಾಗು ಸ್ನೇಹಿತರು ಆಕ್ರಮಣಕಾರಿಯಾಗುತ್ತಾರೆ.

**ಮಿಥುನ** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ನೀವು ಯಾರನ್ನಾದರೂ ಮರಳಿ ಎರವಲು ಕೇಳುತ್ತಿದ್ದರೆ ಮತ್ತು ಇಲ್ಲಿಯವರೆಗೆ ಅವರು ನಿಮ್ಮ ಮಾತನ್ನು ತಪ್ಪಿಸುತ್ತಿದ್ದರೆ, ಇಂದು ಅವರು ಮಾತನಾಡದೆ ಹಣವನ್ನು ನಿಮಗೆ ಹಿಂದಿರುಗಿಸಬಹುದು.

**ಕಟಕ** ನಿಮ್ಮ ಒರಟು ವರ್ತನೆ ನಿಮ್ಮ ಪತ್ನಿಯೊಂದಿಗಿನ ಸಂಬಂಧವನ್ನು ಹಾಳು ಮಾಡಬಹುದು. ಏನಾದರೂ ಬಾಲಿಶವಾದದ್ದನ್ನು ಮಾಡುವ ಮೊದಲು ನಿಮ್ಮ ವರ್ತನೆಯ ಪರಿಣಾಮದ ಬಗ್ಗೆ ಆಲೋಚಿಸಿ. ಸಾಧ್ಯವಾದಲ್ಲಿ ದೂರ ಹೋಗಿ ನಿಮ್ಮ ಮನಸ್ಥಿತಿಯನ್ನು ಬದಲಾಯಿಸಿ.

**ಸಿಂಹ** ನಿಮ್ಮನ್ನು ಪ್ರೇರೇಪಿಸುವ ಭಾವನೆಗಳನ್ನು ಗುರುತಿಸಿ. ನೀವು ಭಯ, ಅನುಮಾನ, ಕೋಪ, ದುರಾಸೆಯಂಥ ನಕಾರಾತ್ಮಕ ಆಲೋಚನೆಗಳನ್ನು ಬಿಡಬೇಕು. ಏಕೆಂದರೆ ಇವುಗಳು ನೀವು ಬಯಸುವುದಕ್ಕೆ ವಿರುದ್ಧವಾದವುಗಳನ್ನು ಆಕರ್ಷಿಸಲು ಆಯಸ್ಕಾಂತದಂತೆ ಕೆಲಸ ಮಾಡುತ್ತದೆ.

**ಕನ್ಯಾ** ನೀವು ಇತರರ ಮೇಲೆ ಹೆಚ್ಚು ಖರ್ಚು ಮಾಡಬಯಸುತ್ತೀರಿ. ಮೊಮ್ಮಕ್ಕಳು ಅಪಾರ ಸಂತೋಷದ ಮೂಲವಾಗುತ್ತಾರೆ. ಧಾರ್ಮಿಕ ಮತ್ತು ಶುದ್ಧ ಪ್ರೀತಿಯನ್ನು ಅನುಭವಿಸಿ. ನೀವು ಕೆಲಸದ ಸ್ಥಳದಲ್ಲಿ ಉತ್ತಮ ಫಲಿತಾಂಶವನ್ನು ಪಡೆಯಲು ನೀವು ಕೆಲಸ ಮಾಡುವ ವಿಧಾನವನ್ನು ನೋಡುವ ಅವಶ್ಯಕತೆಯಿದೆ.

**ತುಲಾ** ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ನಿಮ್ಮ ತಂದೆ ತಾಯಿಯರಲ್ಲಿ ಯಾರಾದರೂ ಒಬ್ಬರು ಹಣವನ್ನು ಸಂಗ್ರಹಿಸುವ ಬಗ್ಗೆ ಉಪನ್ಯಾಸಗಳನ್ನು ನೀಡಬಹುದು, ನೀವು ಅವರ ಮಾತುಗಳನ್ನು ಬಹಳ ಗಮನವಾಗಿ ಕೇಳಬೇಕಾದ ಅಗತ್ಯವಿದೆ.

**ವೃಶ್ಚಿಕ** ಕಿಕ್ಕಿರಿದ ಬಸ್‌ನಲ್ಲಿ ಪ್ರಯಾಣಿಸುವಾಗ ರಕ್ತದೊತ್ತಡವಿರುವ ರೋಗಿಗಳು ಅವರ ಆರೋಗ್ಯದ ಬಗ್ಗೆ ಹೆಚ್ಚು ಎಚ್ಚರಿಕೆ ವಹಿಸಬೇಕು. ಬ್ಯಾಂಕ್ ವ್ಯವಹರಗಳಲ್ಲಿ ಕಾಳಜಿ ವಹಿಸಬೇಕು. ಕುಟುಂಬದಲ್ಲಿ ಒಬ್ಬ ವಯಸ್ಸಾದ ವ್ಯಕ್ತಿಯ ಆರೋಗ್ಯ ಸ್ವಲ್ಪ ಒತ್ತಡಕ್ಕೆ ಕಾರಣವಾಗಬಹುದು.

**ಧನಸ್ಸು** ನಗು ನಿಮ್ಮ ಎಲ್ಲ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ನೀವು ನಿಮ್ಮ ಕೋಪವನ್ನು ನಿಯಂತ್ರಿಸಿ ಮತ್ತು ಕಚೇರಿಯಲ್ಲಿ ಎಲ್ಲರೊಂದಿಗೆ ಉತ್ತಮವಾಗಿ ವರ್ತಿಸಿ., ಆಗೇ ನೀವು ಮಾಡದಿದ್ದರೆ ನಿಮ್ಮ ಕೆಲಸ ಹೋಗಬಹುದು. ನಿಮ್ಮ ಕುಟುಂಬದ ಸದಸ್ಯರ ಅಗತ್ಯಗಳ ಮೇಲೆ ಗಮನ ಹರಿಸುವುದು ನಿಮ್ಮ ಆದ್ಯತೆಯಾಗಿರಬೇಕು.

**ಮಕರ** ನೀವು ಇತರರ ಮುಂದೆ ಹೇಗೆ ವರ್ತಿಸುತ್ತೀರಿ ಮತ್ತು ಏನು ಹೇಳುತ್ತೀರಿ ಎನ್ನುವ ಬಗ್ಗೆ ಎಚ್ಚರದಿಂದಿರಿ. ಇಂದು ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಹೊಂದಿರುವ ಸಾಧ್ಯತೆ ಇದೆ ಆದರೆ ನಿಮ್ಮ ಬುದ್ಧಿವಂತಿಕೆಯಿಂದ ಈ ಹಾನಿಯನ್ನು ಲಾಭದಲ್ಲಿ ಪರಿವರ್ತಿಸಬಹುದು ಸ್ನೇಹಿತರೊಂದಿಗಿನ ಸಂಜೆ ಸಂತೋಷಕರವಾಗಿರುತ್ತದೆ.

**ಕುಂಭ** ಹಿರಿಯರು ಉತ್ತಮ ಲಾಭ ಪಡೆಯಲು ತಮ್ಮ ಹೆಚ್ಚುವರಿ ಶಕ್ತಿಯನ್ನು ಸಕಾರಾತ್ಮಕ ಬಳಕೆಗೆ ವಿನಿಯೋಗಿಸಬೇಕು. ದೀರ್ಘಕಾಲದ ದೃಷ್ಟಿಕೋನದಿಂದ ಹೂಡಿಕೆ ಮಾಡಬೇಕು. ನಿಮ್ಮ ವಿಪರೀತ ಶಕ್ತಿ ಮತ್ತು ಪ್ರಚಂಡ ಉತ್ಸಾಹ ಅನುಕೂಲಕರ ಫಲಿತಾಂಶಗಳನ್ನು ತರುತ್ತದೆ ಹಾಗೂ ಮನೆಯ ಉದ್ವಿಗ್ನತೆಗಳನ್ನು ಶಮನ ಕಾಣಿಸುತ್ತದೆ

**ಮೀನ** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ. ಇಂದು ಷೇರು ಮಾರುಕಟ್ಟೆಯಲ್ಲಿ ಹಣವನ್ನು ಹೂಡಿಕೆ ಮಾಡುವವರು ತಮ್ಮ ಹಣವನ್ನು ಕಳೆದುಕೊಳ್ಳಬಹುದು.

## ಸಾರ್ವಜನಿಕರು ಹಾಗೂ ವರ್ತಕರ ಪರದಾಟ

• **ಉದಯವಾಹಿನಿ ಕೊಟ್ಟೂರು**

ವಿಜಯನಗರ ಜಿಲ್ಲೆಯ ಪ್ರಮುಖ ವಾಣಿಜ್ಯ ಕೇಂದ್ರವಾದ ಕೊಟ್ಟೂರಿನ ಸಂತೆಯಲ್ಲಿ ಮೂಲಸೌಕರ್ಯಗಳ ಕೊರತೆಯಿಂದಾಗಿ ಸಾರ್ವಜನಿಕರು ಹಾಗೂ ವ್ಯಾಪಾರಸ್ಥರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.ಪಟ್ಟಣ ಪಂಚಾಯಿತಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ ಸರಿಯಾದ ಮಾರುಕಟ್ಟೆ ಜಾಗದ ವ್ಯವಸ್ಥೆ ಇಲ್ಲದೆ ರಸ್ತೆ ಬದಿಯಲ್ಲೇ ವ್ಯಾಪಾರ ನಡೆಸಲಾಗುತ್ತಿದ್ದು, ಇದರಿಂದ ತೀವ್ರ ವಾಹನ ದಟ್ಟಣೆ ಉಂಟಾಗುತ್ತಿದೆ

ಪಾದಚಾರಿಗಳು ನಡೆದಾಡಲು ಜಾಗವಿಲ್ಲದಂತಾಗಿದೆ ಮಳೆ ಬಂದರಂತೂ ಸಮಸ್ಸೆ ಹೇಳತೀರದು ಶುಚಿತ್ವದ ಕೊರತೆ ಹಾಗೂ ದುರ್ನಾತ ಸಂತೆಯ ಸುತ್ತಮುತ್ತ ಕಸ-ಕಡ್ಡಿ ಕೊಳೆತ ತರಕಾರಿಗಳನ್ನು ಎಲ್ಲೆಂದರಲ್ಲಿ ಎಸೆಯಲಾಗುತ್ತಿದ್ದು ದುರ್ನಾತ ಬೀರುತ್ತಿದೆ ಇದರಿಂದ ಸಾಂಕ್ರಾಮಿಕ ರೋಗಗಳ ಭೀತಿ ಸ್ಥಳೀಯರನ್ನು ಕಾಡುತ್ತಿದೆ. ಕೂಡಲೇ ಸ್ಥಳೀಯ ಪಟ್ಟಣ ಪಂಚಾಯಿತಿ ತಕ್ಷಣವೇ ಜಾಗೃತರಾಗಿ ಸಂತೆಗೆ ಸೂಕ್ತ ಜಾಗ ಗುರುತಿಸಿ ನೈರ್ಮಲ್ಯ ಮತ್ತು ಮೂಲಸೌಕರ್ಯಗಳನ್ನು ಒದಗಿಸಬೇಕು. ತಪ್ಪಿದ್ದಲ್ಲಿ ಮುಂದಿನ ದಿನಗಳಲ್ಲಿ ಹೋರಾಟ ನಡೆಸುವುದಾಗಿ ಸ್ಥಳೀಯ ನಿವಾಸಿಗಳು ಹಾಗೂ ವ್ಯಾಪಾರಸ್ಥರು ಎಚ್ಚರಿಸಿದ್ದಾರೆ.

## ಹಳೆಯ ವಿದ್ಯುತ್ ಕಂಬ, ತಂತಿಗಳ ಬದಲಾವಣೆಗೆ ಶಾಸಕ ಚವ್ಹಾಣ ಒತ್ತಾಯ

• **ಉದಯವಾಹಿನಿ ಔರಾದ್ :**


ಉದಯವಾಹಿನಿ ಚಿತ್ರ

ಔರಾದ ವಿಧಾನಸಭಾ ಕ್ಷೇತ್ರದಲ್ಲಿ ಬಹಳಷ್ಟು ವರ್ಷಗಳಿಂದ ಬಳಕೆಯಲ್ಲಿರುವ ಹಳೆಯ ವಿದ್ಯುತ್ ಕಂಬಗಳು ಹಾಗೂ ತಂತಿಗಳನ್ನು ಬದಲಿಸಿ, ಹೊಸ ಕಂಬ ಮತ್ತು ತಂತಿಗಳನ್ನು ಅಳವಡಿಸುವ ಕುರಿತು ಶಾಸಕ ಪ್ರಭು ಬಿ.ಚವ್ಹಾಣ ಸರ್ಕಾರವನ್ನು ಒತ್ತಾಯಿಸಿದ್ದಾರೆ. ವಿಧಾನಸಭಾ ಅಧಿವೇಶನದಲ್ಲಿ ಚುಕ್ಕೆ ಗುರುತಿಲ್ಲದ ಪ್ರಶ್ನೆ ಕೇಳಿದ್ದಾರೆ. ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಹಳೆಯ ಹಾಗೂ ಶಿಥಿಲಗೊಂಡಿರುವ ವಿದ್ಯುತ್ ಕಂಬಗಳು ಮತ್ತು ತಂತಿಗಳಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಮಳೆ-ಗಾಳಿ ಸಂದರ್ಭದಲ್ಲಿ ಅಪಾಯದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಹಳೆಯ ವಿದ್ಯುತ್ ಮೂಲಸೌಕರ್ಯವನ್ನು ಹಂತ ಹಂತವಾಗಿ ಬದಲಿಸಿ, ಸುರಕ್ಷಿತ ಹಾಗೂ ಗುಣಮಟ್ಟದ ವಿದ್ಯುತ್ ವ್ಯವಸ್ಥೆ ಕಲ್ಪಿಸುವ ಅಗತ್ಯವನ್ನು ಶಾಸಕರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಶಾಸಕರ ಪ್ರಶ್ನೆಗೆ ಇಂಧನ ಸಚಿವರಾದ ಕೆ.ಜೆ. ಜಾರ್ಜ್ ಅವರು ಲಿಖಿತ ಉತ್ತರ ನೀಡಿದ್ದು, ಕ್ಷೇತ್ರದಲ್ಲಿರುವ ಹಳೆಯ ವಿದ್ಯುತ್ ಕಂಬಗಳು ಹಾಗೂ ತಂತಿಗಳ ಸ್ಥಿತಿಗತಿಗಳ ಕುರಿತು ಮಾಹಿತಿ ನೀಡಿದ್ದಾರೆ. ಸಚಿವರ ಉತ್ತರಕ್ಕೆ ತೃಪ್ತರಾಗದ ಶಾಸಕರು ಲಿಖಿತ ಮಾಹಿತಿಗೂ ವಾಸ್ತವಕ್ಕೂ ವ್ಯತ್ಯಾಸಗಳಿವೆ. ಬಹಳಷ್ಟು ಗ್ರಾಮಗಳಲ್ಲಿ ಹಳೆಯ ವಿದ್ಯುತ್ ತಂತಿಗಳು ಜೋತು ಬಿದ್ದು ತೀವ್ರ ಅಪಾಯ ಉಂಟುಮಾಡುವ ಸ್ಥಿತಿಯಲ್ಲಿವೆ. ವಿದ್ಯುತ್ ಅವಘಡಗಳು ನಿರಂತರವಾಗಿ ನಡೆಯುತ್ತಿವೆ. ಸಾರ್ವಜನಿಕ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ತುರ್ತಾಗಿ ಹಳೆಯ ಕಂಬ ಹಾಗೂ ತಂತಿಗಳನ್ನು ಬದಲಿಸಿ, ಹೊಸ ವಿದ್ಯುತ್ ಮೂಲಸೌಕರ್ಯ ಅಳವಡಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಗಿದೆ

## ಸಚಿವ ಸಂಪುಟ ಸಭೆ ನಡೆಸಲು ಪಾಟೀಲ ಆಗ್ರಹ

• **ಉದಯವಾಹಿನಿ ಕಲಬುರಗಿ,**

ಕಲ್ಯಾಣ ಕರ್ನಾಟಕ ಭಾಗದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರ, ಕೊಪ್ಪಳ, ಬಳ್ಳಾರಿ, ವಿಜಯನಗರ ಜಿಲ್ಲೆಗಳ ರೈತರು ಬರಗಾಲದಿಂದ ಸಂಕಷ್ಟದಲ್ಲಿದ್ದು, ಈ ಭಾಗದಲ್ಲಿ ಒಂದು ದಿನದ ಸಚಿವ ಸಂಪುಟ ಸಭೆ ನಡೆಸಿ ರೈತರ ಸಮಸ್ಯೆಗಳನ್ನು ಬಗೆ ಹರಿಸಬೇಕು ಎಂದು ನವ ಕರ್ನಾಟಕ ರೈತ ಸಂಘದ ಅಧ್ಯಕ್ಷ ದಯಾನಂದ ಸಿ.ಪಾಟೀಲ ಒತ್ತಾಯಿಸಿದರು. ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರು ವರ್ಷಗಳ ಹಿಂದೆ ಈ ಭಾಗದಲ್ಲಿ ಅತಿವೃಷ್ಟಿಯಿಂದ ಆ ನಂತರ ಮಳೆ ಕೊರತೆಯಿಂದ ಬೆಳೆ ಹಾಳಾಗಿ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಸಾಲಬಾಧೆ ತಾಳದೆ ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದರೆ. ಈ ಹಿನ್ನೆಲೆಯಲ್ಲಿ ಈ ಭಾಗದಲ್ಲಿ ಒಂದು ದಿನದ ಸಚಿವ ಸಂಪುಟ ಸಭೆ ನಡೆಸಿ ಬರಗಾಲ ಘೋಷಣೆ, ರೈತರ ಸಾಲ ಮನ್ನಾ, ಉಳಿದ ಬೆಳೆ ವಿಮೆ ಹಣ ಬಿಡುಗಡೆ, ಬರ ಪರಿಹಾರ ಒದಗಿಸಲು ನಿರ್ಣಯ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

## ‘ಉಳುವವನೇ ಭೂ ಒಡೆಯ’ ಕಾನೂನು ತಂದ ಕೀರ್ತಿ, ಸಾಮಾಜಿಕ ಪರಿವರ್ತನೆಗೆ ಅರಸು ಕೊಡುಗೆ ಅಪಾರ

• **ಉದಯವಾಹಿನಿ ಮುದ್ದೇಬಿಹಾಳ:**

ಹಿಂದುಳಿದ ಸಮುದಾಯಗಳ ಅಭಿವೃದ್ಧಿಗೆ ಹಾಗೂ ದೇಶದಲ್ಲೇ ಮೊದಲ ಬಾರಿಗೆ ಭೂ ಸುಧಾರಣೆ ಕಾಯ್ದೆ ಜಾರಿಗೊಳಿಸಿ ‘ಉಳುವವನೇ ಭೂ ಒಡೆಯ’ ಕಾನೂನು ತಂದ ಕೀರ್ತಿ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರಿಗೆ ಸಲ್ಲುತ್ತದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲ್ಲೂಕು ಅಧಿಕಾರಿ ಶ್ರೀಮತಿ ಶಿವಲೀಲಾ ಕೊಣ್ಣೂರ ಹೇಳಿದರು. ತಾಲ್ಲೂಕು ಆಡಳಿತ, ತಾಲೂಕು ಪಂಚಾಯತ್ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಗುರುವಾರ ಪಟ್ಟಣದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸಾಮಾಜಿಕ ಪರಿವರ್ತನೆಯ ಹರಿಕಾರ, ಮಾಜಿ ಸಿಎಂ ಡಿ. ದೇವರಾಜ ಅರಸ ಅವರ 111ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಅರಸು ಅವರು ಯಾವುದೇ ಜಾತಿ, ಧರ್ಮಕ್ಕೆ ಸೀಮಿತವಾಗದೆ ಎಲ್ಲಾ ಸಮುದಾಯಗಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದರು ಎಂದರು.

ವಿಶೇಷ ಉಪನ್ಯಾಸ ನೀಡಿದ ಉಪನ್ಯಾಸಕ ಎಂ.ಎಸ್. ಹಾಲ್ಯಾಳ, 8 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ ಅರಸು ಅವರು ಭೂ ಸುಧಾರಣೆ ಮೂಲಕ 70-80 ಲಕ್ಷ ರೈತರಿಗೆ ಭೂಮಿಯ ಹಕ್ಕು ದೊರಕಿಸಿಕೊಟ್ಟರು. ಹಾವನೂರು ಆಯೋಗದ


ಉದಯವಾಹಿನಿ ಚಿತ್ರ

ವರದಿ ಜಾರಿಗೊಳಿಸಿ ಹಿಂದುಳಿದ ವರ್ಗಗಳಿಗೆ ಶೇ.27ರಷ್ಟು ಮೀಸಲಾತಿ ತಂದರು. ಬಿಸಿಎಂ ಹಾಸ್ಟೆಲ್‌ಗಳಿಗೆ ಅಡಿಪಾಯ ಹಾಕಿದ್ದಲ್ಲದೆ, ‘ಮೈಸೂರು’ ರಾಜ್ಯಕ್ಕೆ ‘ಕರ್ನಾಟಕ’ ಎಂದು ಮರುನಾಮಕರಣ ಮಾಡಿ ಇತಿಹಾಸ ನಿರ್ಮಿಸಿದರು ಎಂದು ವಿವರಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ಬಸವೇಶ್ವರ ವೃತ್ತದಿಂದ ತಹಶೀಲ್ದಾರ್ ಕಚೇರಿಯವರೆಗೆ ಡಿ. ದೇವರಾಜ ಅರಸ ಅವರ ಭಾವಚಿತ್ರದ ಭವ್ಯ ಮೆರವಣಿಗೆ ಜರುಗಿತು. ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಗರಿಷ್ಠ ಅಂಕಗಳಿಸಿದ ಹಾಸ್ಟೆಲ್ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಅತ್ಯುತ್ತಮ ನಿಲಯಪಾಲಕ ಪ್ರಶಸ್ತಿ ಪಡೆದ ಐ.ಎಸ್. ಮೋರ್ಕಿ ಅವರನ್ನು ಸನ್ಮಾನಿಸಲಾಯಿತು.

> ಶೋಷಿತರ ಬದುಕಿನಲ್ಲಿ ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆ ತರಲು ಅರಸು ಅವರು ಐತಿಹಾಸಿಕ ನಿರ್ಧಾರಗಳನ್ನು ಕೈಗೊಂಡರು. ಮಲ ಹೊರುವ ಪದ್ಧತಿ ನಿರ್ಮೂಲನೆ, 20 ಅಂಶಗಳ ಕಾರ್ಯಕ್ರಮ ಹಾಗೂ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿಗಮ ಸ್ಥಾಪನೆಯ ಮೂಲಕ ಬಡವರ ಬದುಕಿಗೆ ಆಸರೆಯಾದರು ಎಂದು ಸ್ಮರಿಸಿದರು.
> -ಕಾಂಗ್ರೆಸ್ ಹಿರಿಯ ಮುಖಂಡ ವೈ.ಎಚ್. ವಿಜಯಕರ

ಕಾರ್ಯಕ್ರಮದಲ್ಲಿ ತಾಪಂ ಇಒ ಸಂಗನಗೌಡ ಬಿರಾದಾರ, ತಹಶೀಲ್ದಾರ್ ಕಚೇರಿಯ ಶಿರಸ್ತೇದಾರ್ ಎಂ.ಎ. ಬಾಗೇವಾಡಿ, ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಬಸಂತಿ ಮಠ, ಕ್ರೈಂ ಪಿಎಸ್ಐ ಆರ್.ಎಸ್. ಭಂಗಿ, ತಾಲ್ಲೂಕು ವೈದ್ಯಾಧಿಕಾರಿ ಡಾ. ಸತೀಶ ತಿವಾರಿ, ಮುಖ್ಯ ಪಶುವೈದ್ಯಾಧಿಕಾರಿ ಶಿವಾನಂದ ಮೇಟಿ ಹಾಗೂ ಮಾವಿನಭಾವಿ ಸಿದ್ದಪ್ಪಜ್ಜನ ಮಠದ ಶ್ರೀ ಬಸವರಾಜ ಗುರೂಜಿ ಭಾಗವಹಿಸಿದ್ದರು.ಪ್ರಮುಖರಾದ ಸಂಗಮೇಶ ನಾಲತವಾಡ, ನಾಗೇಶ ಭಜಂತ್ರಿ, ನಾನಪ್ಪ ನಾಯಕ, ಸಿಬ್ಬಂದಿಗಳಾದ ಜ್ಯೋತಿ ಚೌಧರಿ, ಲಕ್ಕಣ್ಣ ಬಿರಾದಾರ, ಭೀಮಸಿ ಗುಂಡಿಮನಿ, ಇಂಧುಮತಿ ಚವ್ಹಾಣ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಹೆಜಮಾಡಿ ಭಾಗದ ಟೋಲ್ ವ್ಯಾಪ್ತಿಯ ಸ್ಥಳೀಯರಿಗೆ ವಿನಾಯಿತಿ ನೀಡುವಂತೆ ಶಿಫಾರಸು

### ದಿನದಲ್ಲಿ ಹಲವು ಬಾರಿ ಟೋಲ್‌ನಲ್ಲಿ ಹಾದುಹೋಗುವಾಗ ಪ್ರತಿಬಾರಿಯೂ ಶುಲ್ಕ ಪಾವತಿ ಮಾಡಲು ಅನಾನುಕೂಲತೆ ಉಂಟಾಗುತ್ತದೆ

• **ಉದಯವಾಹಿನಿ ಉಡುಪಿ-**

ರಾಷ್ಟ್ರೀಯ ಹೆದ್ದಾರಿ ಸುಂಕ ವಸೂಲಾತಿ ಕೇಂದ್ರವು ಸಾಸ್ತಾನ ಹಾಗೂ ಶಿರೂರು ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಸಾರ್ವಜನಿಕರಿಗೆ ನೀಡಿರುವ ರಿಯಾಯಿತಿಯನ್ನು ಹೆಜಮಾಡಿ ಭಾಗದ ಟೋಲ್ ವ್ಯಾಪ್ತಿಯ ಸ್ಥಳೀಯರಿಗೆ ನೀಡುವಂತೆ ಕೋರಿ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗೆ ಶಿಫಾರಸ್ಸು ಪತ್ರ ಬರೆಯಲಾಗುವುದು

1 : ವ್ಯಾಪ್ತಿಯಲ್ಲಿ ಸ್ಥಳೀಯರಿಗೆ ವಿನಾಯಿತಿ
2 : ನೋಂದಾಯಿತ ವಾಹನಗಳಿಗೆ ಸುಂಕ
3 : ಸರ್ವೀಸ್ ರಸ್ತೆಗಳನ್ನು ನಿರ್ಮಾಣ

ಎಂದು ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ ಹೇಳಿದರು.

ಅವರು ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹೆದ್ದಾರಿ ಟೋಲ್ ಸುಂಕ ವಸೂಲಾತಿಗೆ ಸಂಬಂಧಿಸಿದಂತೆ ಚರ್ಚಿಸಲು ಆಯೋಜಿಸಲಾದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ರಾಷ್ಟ್ರೀಯ ಹೆದ್ದಾರಿ 66 ರ ಹೆಜಮಾಡಿ ಟೋಲ್‌ನ ವ್ಯಾಪ್ತಿಯಲ್ಲಿ ವಾಸವಿರುವ ಸ್ಥಳೀಯ ಸಾರ್ವಜನಿಕರು ತಮ್ಮ ದೈನಂದಿನ ಕಾರ್ಯಚಟುವಟಿಕೆಗಳಿಗೆ ದಿನದಲ್ಲಿ ಹಲವು ಬಾರಿ ಟೋಲ್‌ನಲ್ಲಿ ಹಾದುಹೋಗುವಾಗ ಪ್ರತಿಬಾರಿಯೂ ಶುಲ್ಕ ಪಾವತಿ ಮಾಡಲು ಅನಾನುಕೂಲತೆ ಉಂಟಾಗುತ್ತದೆ. ಟೋಲ್ ಪ್ಲಾಜಾ ಸುತ್ತಮುತ್ತಲಿನ ಸ್ಥಳೀಯ ವಾಹನಗಳಿಗೆ ಹಾಗೂ ನಿಗದಿತ ವ್ಯಾಪ್ತಿಯಲ್ಲಿ ಬರುವ ನೋಂದಾಯಿತ ವಾಹನಗಳಿಗೆ ಸುಂಕ


ಉದಯವಾಹಿನಿ ಚಿತ್ರ

ವಿನಾಯಿತಿ ಅಥವಾ ಮಾಸಿಕ ಪಾಸ್ ಸೌಲಭ್ಯ ಕಲ್ಪಿಸಿದಲ್ಲಿ ಅವರುಗಳಿಗೆ ಅನುಕೂಲವಾಗಲಿದೆ ಎಂಬ ಬೇಡಿಕೆ ಇದೆ.

ರಾಷ್ಟ್ರೀಯ ಹೆದ್ದಾರಿ 66 ರ ಕೆಲವು ವ್ಯಾಪ್ತಿಯಲ್ಲಿ ಸರ್ವೀಸ್ ರಸ್ತೆಗಳನ್ನು ನಿರ್ಮಾಣ ಮಾಡಲು ಅನುಮತಿ ದೊರಕಿದ್ದು, ಇವುಗಳ ಕಾಮಗಾರಿಗಳನ್ನು ಶೀಘ್ರದಲ್ಲಿಯೇ ಪ್ರಾರಂಭಿಸಿ, ಪೂರ್ಣಗೊಳಿಸಬೇಕು.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸರ್ವೀಸ್ ರಸ್ತೆ, ರಸ್ತೆ ರಿಫ್ಲೆಕ್ಟರ್‌ಗಳ ಅಳವಡಿಕೆ, ದಾರಿದೀಪ ಅಳವಡಿಕೆ, ರಸ್ತೆಯಲ್ಲಿ ಹೊಂಡ-ಗುಂಡಿ ದುರಸ್ಥಿ, ಒಳಚರಂಡಿ ಕಾಮಗಾರಿ, ಜಂಕ್ಷನ್‌ಗಳಲ್ಲಿ ಸರಿಯಾದ ಸೂಚನಾ ಫಲಕ ಅಳವಡಿಸುವುದು ಸೇರಿದಂತೆ ಮತ್ತಿತರ ಸುರಕ್ಷತಾ ಕಾಮಗಾರಿಗಳನ್ನು ಆದ್ಯತೆಯ ಮೇಲೆ ಕೈಗೊಂಡಲ್ಲಿ ಅಪಘಾತಗಳಿಗೆ ಕಡಿವಾಣ ಹಾಕಬಹುದಾಗಿದ್ದು, ಇದಕ್ಕೆ ಒತ್ತು ನೀಡಬೇಕು ಎಂದು ರಾ.ಹೆ. ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಸೂಚಿಸಿದರು.

> ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಸಾಸ್ತಾನ ಹಾಗೂ ಶಿರೂರು ಸುಂಕ ವಸೂಲಾತಿ ಕೇಂದ್ರವು ಸ್ಥಳೀಯ ವಾಹನಗಳಿಗೆ ಈ ಹಿಂದೆ ನೀಡುತ್ತಿರುವ ರಿಯಾಯಿತಿಯನ್ನು ಮುಂದುವರೆಸುತ್ತಿದ್ದು, ಹೆಜಮಾಡಿ ವ್ಯಾಪ್ತಿಯಲ್ಲಿ ಈ ನಿಯಮ ಪಾಲನೆಯಾಗುತ್ತಿಲ್ಲ ಎಂಬ ದೂರುಗಳು ಸಾರ್ವಜನಿಕರಿಂದ ಕೇಳಿ ಬರುತ್ತಿವೆ. ಸಾಸ್ತಾನದಲ್ಲಿ 10 ಕಿ.ಮೀ ವ್ಯಾಪ್ತಿಯಲ್ಲಿ ಸ್ಥಳೀಯರಿಗೆ ವಿನಾಯಿತಿ ನೀಡಲಾಗಿದೆ. -ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ

ರಾಷ್ಟ್ರೀಯ ಹೆದ್ದಾರಿ ಹೆಜಮಾಡಿ ಟೋಲ್ ಸಮೀಪದ ಸಾರ್ವಜನಿಕರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಜನಪ್ರತಿನಿಧಿಗಳು, ಮಾಜಿ ‘ಜನಪ್ರತಿನಿಧಿಗಳು, ಹೆಜಮಾಡಿ ಟೋಲ್ ಸಮೀಪದ ಸ್ಥಳೀಯವಾಗಿ ವಾಸವಿರುವ ನಾವುಗಳು ನಮ್ಮ ದೈನಂದಿನ ಕೆಲಸ

**ಸಾರ್ವಜನಿಕರೊಂದಿಗೆ ಸಹನೆಯಿಂದ ವರ್ತಿಸಿ**

ರಾ. ಹೆದ್ದಾರಿಯ ಕೆಲವೊಂದು ವ್ಯಾಪ್ತಿಯಲ್ಲಿ ಸರ್ವಿಸ್ ರೋಡ್ ನಿರ್ಮಾಣ ಮಾಡಬೇಕು. ರಸ್ತೆ ದೀಪ ಅಳವಡಿಕೆ, ಟೋಲ್‌ನ ಸಿಬ್ಬಂದಿಗಳು ಸಾರ್ವಜನಿಕರೊಂದಿಗೆ ಸಹನೆ ವರ್ತಿಸುವ ಬಗ್ಗೆ, ಸೇರಿದಂತೆ ಮತ್ತಿತರ ಅಹವಾಲುಗಳನ್ನು ಸಲ್ಲಿಸಿದರು.

ಈ ಮಾದರಿಯನ್ನೇ ಹೆಜಮಾಡಿಯಲ್ಲಿ ಅನುಸರಿಸಿದ್ದಲ್ಲಿ ಸ್ಥಳೀಯರಿಗೆ ಅನುಕೂಲವಾಗಲಿದೆ ಎಂಬ ಬೇಡಿಕೆಯನ್ನು ಸ್ಥಳೀಯರು ಸಲ್ಲಿಸುತ್ತಿದ್ದಾರೆ. ಈ ಬಗ್ಗೆ ಜಿಲ್ಲಾಡಳಿತದ ವತಿಯಿಂದ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗೆ ವಿನಾಯಿತಿ ನೀಡುವಂತೆ ಮನವಿ ಪತ್ರ ಸಲ್ಲಿಸಲಾಗುವುದು ಎಂದರು.

ಕಾರ್ಯಗಳಿಗೆ ದಿನದಲ್ಲಿ ಹಲವಾರು ಬಾರಿ ಟೋಲ್ ಅನ್ನು ಪ್ರವೇಶಿಸಿ ಹೋಗುವುದು ಅನಿವಾರ್ಯವಾಗಿದ್ದು, ಪ್ರತೀ ಬಾರಿಯೂ ಶುಲ್ಕ ಪಾವತಿ ಮಾಡುವುದು ಕಷ್ಟಸಾಧ್ಯ. ಸಾಸ್ತಾನಕ್ಕೆ ನೀಡುವ ವಿನಾಯಿತಿಯನ್ನು ನಮಗೂ ನೀಡಬೇಕು ಎಂದು ಒತ್ತಾಯಿಸಿದರು. ಸಭೆಯಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಮ್ ಶಂಕರ್, ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ್, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ಕಿರಣ್ ಎಸ್. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಅಬ್ದುಲ್ ಜಾವೇದ್ ಆಯ್ಕೆ, ಅಭಿಯಂತರುಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು, ಸಾರ್ವಜನಿಕರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಶೋಷಿತ ಹಿಂದುಳಿದ ವರ್ಗಗಳ ಆಶಾಕಿರಣ, ರೈತರಿಗೆ ಬಿತ್ತನೆಗೆ ಬೀಜ ರಸಗೊಬ್ಬರ ವಿತರಣೆಗೆ ಪ್ರಾರಂಭಿಸಿದ್ದು ದೇವರಾಜ ಅರಸು

• **ಉದಯವಾಹಿನಿ,ಚಿಂಚೋಳಿ**

ಶೋಷಿತ ಹಿಂದುಳಿದ ವರ್ಗಗಳ ಆಶಾಕಿರಣ ಮತ್ತು ರೈತರಿಗೆ ಬಿತ್ತನೆ ಬೀಜ,ರಸಗೊಬ್ಬರ ವಿತರಿಸಿದ್ದು ಮತ್ತು ಭೂಸುಧಾರಣೆ ಕಾಯ್ದೆ ಜಾರಿ ಬಡವರ ಹಿಂದುಳಿದವರ ಸಾಮಾಜಿಕ ನ್ಯಾಯ ನೀಡಿದ ಮಹಾನ್ ವ್ಯಕ್ತಿ ಮಾಜಿ ಮುಖ್ಯಮಂತ್ರಿ ದಿ.ದೇವರಾಜ ಅರಸು ಅವರು ಎಂದು ತಹಸೀಲ್ದಾರ್ ಸುಬ್ಬಣ್ಣ ಜಮಖಂಡಿ ಹೇಳಿದರು.

ಪಟ್ಟಣದ ದೇವರಾಜ ಅರಸು ಭವನದಲ್ಲಿ ತಾಲ್ಲೂಕಾಡಳಿತ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಮ್ಮಿಕೊಂಡ ಡಿ.ದೇವರಾಜ ಅರಸು ಅವರ 111ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,ಬಡವರ ದಿನದಲಿತರ ಮಕ್ಕಳು ಶಿಕ್ಷಣದಿಂದ ವಂಚಿತ ಆಗದಂತೆ ಹಿಂದುಳಿದ ವರ್ಗಗಳ ವಸತಿನಿಲಯಗಳು ಪ್ರಾರಂಭಿಸಿದರು ಎಂದರು.

ಸಿಬಿ.ಪಾಟೀಲ್ ಕಾಲೇಜಿನ ಪ್ರಾಚಾರ್ಯರು ಡಾ.ಎಮ್.ಎನ್.ಸುಲ್ತಾನಪೂರ ವಿಶೇಷ ಉಪನ್ಯಾಸ ನೀಡಿದ ಅವರು,ದೇವರಾಜ ಅರಸು ಅವರು ಎರಡು ಬಾರಿ ಸಿಎಂ.ಯಾಗಿ ದಮನೀಯರ ಧ್ವನಿಯಾಗಿದ್ದರು,1942ರಲ್ಲಿ ರಾಜಕೀಯ ಪ್ರವೇಶವಾಗಿ ಇದಕ್ಕೂ ಮೊದಲು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದರು.

ಯುವಕರಿಗೆ ಸ್ವಾಲಂಬಿ ಜೀವನ ನಡೆಸಲು ಅವರಿಗೆ ಸಾಲ ವಿತರಣೆ,ಕಾಲರಶೀಪ್ ವಿತರಸಿದರು,ಗ್ರಾಮೀಣ ಭಾಗದ ಬಡ ಜನರಿಗೆ ಉಚಿತ ಭಾಗ್ಯಜ್ಯೂತಿ ವಿದ್ಯುತ್


ಉದಯವಾಹಿನಿ ಚಿತ್ರ

ಸರಬುರಾಜು,ಸಾಮಾಜೀಕ,ಹಿಂದುಳೀದ ಅಲ್ಪಸಂಖ್ಯಾತರ ರಾಜಕೀಯವಾಗಿ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಅಭಿವೃದ್ಧಿಗಾಗಿ ಹಾವನೂರ ಆಯೋಗ ರಚನೆ ಮಾಡಿದರು ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ರಾಹುಲ್ ಪಂಚಶೀಲ್ ಪ್ರಾಸ್ತಾವಿಕ ಮಾತನಾಡಿ ದೇವರಾಜ ಅರಸು ಒಂದು ವರ್ಗಕ್ಕೆ ಸೀಮೀತವಾಗದೆ ಇಡಿ ರಾಜ್ಯಕಂಡ ಮಾನವತಾವದಿ,ವ್ಯಯಕ್ತಿಕ ಬದುಕಿನಲ್ಲಿ ಆಸಕ್ತಿ ತೋರದೆ ಸಾಮಾಜೀಕ ಕಾರ್ಯದಲ್ಲಿ ತೋಡಗಿ ಪ್ರತಿಯೋಬ್ಬರಿಗೂ ಸಮಾನತೆ ಹಕ್ಕು ನೀಡಿ,ಹಿಂದುಳಿದ ವರ್ಗಗಳ ಆಯೋಗ ರಚಿಸಿ ಅದರಲ್ಲಿ ಇಲಾಖೆ ರಚಿಸಿ ವಸತಿನಿಲಯಗಳು ಪ್ರಾರಂಭಿಸಿ ಅನೇಕ ಬಡ ಮಕ್ಕಳಿಗೆ ಅಕ್ಷರ ಕಲಿಯುವ ಭಾಗ್ಯ ದೊರಕಿದೆ ಎಂದರು.

> ಹಿಂದುಳಿದ ವರ್ಗಗಳ ವಸತಿನಿಲಯಗಳಲ್ಲಿ ಎಸ್.ಎಸ್.ಎಲ್.ಸಿ 570ಅಂಕ ಪಡೆದ ರೇಣುಕಾ ಶರಣಯ್ಯ,ಪಿಯುಸಿಯಲ್ಲಿ 554ಅಂಕಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು,ಭಾಷಣ ಸ್ಪರ್ಧೆ ಪ್ರಥಮ ಚಂದ್ರಕಾಂತ,ದ್ವಿತೀಯ ತ್ರೀವೇಣಿ,ಪ್ರಬಂಧ ಸ್ಪರ್ಧೆ ಮಹಾಲಕ್ಷ್ಮಿ ಪ್ರಥಮ,ಚಂದ್ರಕಾಂತ ದ್ವಿತೀಯ,ರಸಪ್ರಶ್ನೆ ನಾಗರಾಜ ಪ್ರಥಮ ಪೂಜಾ ದ್ವಿತೀಯ ಸ್ಥಾನ ಎಲ್ಲಾ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಬಹುಮಾನ ನೀಡಲಾಯಿತು.

ಬಿಸಿಎಂ ಕಲ್ಯಾಣಾಧೀಕಾರಿ ರಾಹುಲ್ ಪಂಚಶೀಲ್ ಸ್ವಾಗತಿಸಿದರು,ಪ್ರಾಚಾರ್ಯರು ಮಲ್ಲಿಕಾರ್ಜುನ ಪಾಲಾಮೂರ್ ನಿರೂಪಿಸಿದರು,ಶಿಕ್ಷಣ ಸಂಯೋಜಕ ಅಶೋಕ ಹೂವಿನಭಾವಿ ವಂದಿಸಿದರು.

ಬಿಇಒ ಧೂಳಪ್ಪ ಮಾಳೆನೂರ,ಮುಖ್ಯಾಧಿಕಾರಿ ಕಾಶಿನಾಥ ಧನ್ನಿ,ಟಿಹೆಚ್‌ಒ ಸೈಯದ್ ಲತೀಫ್,ಅಗ್ನಿ ಶಾಮಕದಳ ಹಸನಅಲಿ,ಟಿಪಿಎಸ್ ವ್ಯವಸ್ಥಾಪಕ ಮಲ್ಲಿಕಾರ್ಜುನ,ಸಾವಿತ್ರಿ ಬಡಗೇರ,ಗಿರಿರಾಜ ಸಜ್ಜನ,ಮೇಲ್ವಿಚಾರಕರು ರೇಣುಕಾ,ದೀಪಾ,ವಿಜಯಲಕ್ಷ್ಮಿ, ರೇಷ್ಮಾ,ಮಹಾದೇವಿ,ತೀರ್ಥಪ್ಪ,ರಾಜು ರಾಠೋಡ್,ಹಾಗೂ ಕೆಎಂ ಬಾರಿ,ಹಣಮಂತ ಪೂಜಾರಿ,ಭೀಮಶೆಟ್ಟಿ ಮುರುಡಾ,ಅಮರ ಲೋಡನೂರ,ಗೋಪಾಲ ಎಂಪಿ,ಹೀರಾ ಪವ್ಹಾರ,ಬಸವರಾಜ ಬಳಿಚಕ್ರ ಅನೇಕರಿದರು.

## ಕೃಷ್ಣಮೃಗ ಬೇಟೆ ಪ್ರಕರಣ: ಆರು ಆರೋಪಿಗಳ ಬಂಧನ, ರೈಫಲ್ ಸೇರಿ ವಾಹನ ಜಪ್ತಿ

• **ಉದಯವಾಹಿನಿ ಬೀದರ್:**

ಜಿಲ್ಲೆಯ ಹೊನ್ನಿಕೇರಿ ಕಾಯ್ದಿಟ್ಟ ಅರಣ್ಯ ಪ್ರದೇಶದ ಸಮೀಪದ ಚೊಂಡಿ-ಮಮದಾಪುರ ಹುಲ್ಲುಗಾವಲು ಪ್ರದೇಶದಲ್ಲಿ ಕೃಷ್ಣಮೃಗವನ್ನು ಬೇಟೆಯಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು ಆರು ಆರೋಪಿಗಳನ್ನು ಅರಣ್ಯ ಇಲಾಖೆ ಬಂಧಿಸಿದೆ. ಕೃತ್ಯಕ್ಕೆ ಬಳಸಿದ್ದ ಒಂದು ರೈಫಲ್ ಹಾಗೂ ಎರಡು ನಾಲ್ಕು ಚಕ್ರದ ವಾಹನಗಳನ್ನು ಜಪ್ತಿ ಮಾಡಲಾಗಿದೆ. ಆಗಸ್ಟ್ 17ರಂದು ಕೃಷ್ಣಮೃಗ (ಆಂಟಿಲೋಪ್ ಸರ್ವಿಕಾಪ್ರಾ) ಬೇಟೆಯಾಡಿದ ಪ್ರಕರಣ ಬೆಳಕಿಗೆ ಬಂದಿತ್ತು.

ಘಟನೆ ಬಳಿಕ ಬೀದರ್ ತಾಲ್ಲೂಕಿನ ಚೊಂಡಿ ತಾಂಡಾ ಹಾಗೂ ಮಮದಾಪುರ ತಾಂಡಾದ ಗ್ರಾಮಸ್ಥರು ಸಾಹಸ ಪ್ರದರ್ಶಿಸಿ ಮೂವರು ಆರೋಪಿಗಳನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದರು. ನಂತರ ಅವರನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿ ಪ್ರಕರಣ ದಾಖಲಿಸಲಾಗಿತ್ತು.


ಉದಯವಾಹಿನಿ ಚಿತ್ರ

ಉಳಿದ ಮೂವರು ಆರೋಪಿಗಳು ಪರಾರಿಯಾಗಿದ್ದು, ಅವರ ಬಂಧನಕ್ಕಾಗಿ ಅರಣ್ಯ ಇಲಾಖೆ ವಿಶೇಷ ತಂಡ ರಚಿಸಿ ಕಾರ್ಯಾಚರಣೆ ನಡೆಸಿತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರ ಮಾರ್ಗದರ್ಶನದಲ್ಲಿ ಕಲಬುರಗಿ ಜಿಲ್ಲೆ ಹಾಗೂ ತೆಲಂಗಾಣ ಅರಣ್ಯ ಇಲಾಖೆಯ ಅಧಿಕಾರಿಗಳ ಸಹಕಾರದೊಂದಿಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮುನೀರ್ ಅಹ್ಮದ್ ನೇತೃತ್ವದ ತಂಡ ಆಗಸ್ಟ್ 18ರಂದು ಪರಾರಿಯಾಗಿದ್ದ ಮೂವರು

> ಆರೋಪಿಗಳು ವನ್ಯಜೀವಿ ಬೇಟೆಗೆ ಬಳಸಿದ್ದ ಅತ್ಯಾಧುನಿಕ ಲಾಂಗ್ ರೇಂಜ್ ರೈಫಲ್ ಸೇರಿದಂತೆ ಎರಡು ನಾಲ್ಕು ಚಕ್ರದ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಪ್ರಕರಣದ ಕುರಿತು ಬೀದರ್ ವಲಯ ಅರಣ್ಯಾಧಿಕಾರಿ ಪ್ರವೀಣಕುಮಾರ ಮೊರೆ ಅವರು ತನಿಖೆ ಮುಂದುವರಿಸಿದ್ದಾರೆ.

ಆರೋಪಿಗಳನ್ನೂ ಬಂಧಿಸುವಲ್ಲಿ ಯಶಸ್ವಿಯಾಯಿತು. ಪ್ರಕರಣದಲ್ಲಿ ಒಟ್ಟು ಆರು ಆರೋಪಿಗಳನ್ನು ಬಂಧಿಸಲಾಗಿದ್ದು, ಅವರ ವಿರುದ್ಧ-02/2026-27 ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಪ್ರಾಥಮಿಕ ತನಿಖೆಯಲ್ಲಿ ಆರೋಪಿಗಳಲ್ಲಿ ಮೂವರು ಕಲಬುರಗಿ ಜಿಲ್ಲೆಯ ಜೇವರ್ಗಿ (ಚಿಂಚೋಳಿ) ತಾಲ್ಲೂಕಿನವರಾಗಿದ್ದು, ಇನ್ನೂ ಮೂವರು ತೆಲಂಗಾಣದ ಹೈದರಾಬಾದ್ ಮೂಲದವರಾಗಿದ್ದಾರೆ ಎಂದು ತಿಳಿದುಬಂದಿದೆ.

## ಇಟಾಚಿ ಮೂಲಕ ಹಗರಿಹಳ್ಳಕ್ಕೆ ನೀರು

• **ಉದಯವಾಹಿನಿ ಹಗರಿಬೊಮ್ಮನಹಳ್ಳಿ,**

ಈ ವರ್ಷ ಮುಂಗಾರು ಮಳೆ ಕೈ ಕೊಟ್ಟಿರುವ ಹಿನ್ನೆಲೆಯಲ್ಲಿ ರೈತರು ಸಂಕಷ್ಟದಲ್ಲಿದ್ದಾರೆ. ಆದರೆ ಮಲೆನಾಡಿನ ಭಾಗಗಳಲ್ಲಿ ಉತ್ತಮ ಮಳೆ ಆಗುತ್ತಿರುವುದರಿಂದ ದಿನದಿಂದ ದಿನಕ್ಕೆ ತುಂಗಭದ್ರಾ ಡ್ಯಾಂ ನ ‘ ಒಡಲು ತುಂಬುತ್ತಿರುವುದರಿಂದ ಕೆಲವು ಭಾಗದ ರೈತರ ಮೊಗದಲ್ಲಿ ಸಂತಸ ಮೂಡಿದೆ. ತಾಲ್ಲೂಕಿನ ಕಡಲಬಾಳು, ಚಿಕ್ಕ ಸೊಬಟಿ, ಕೆ ಓಬಳಾಪುರ, ಕಾತ್ಯಾಯನಮರಡಿ, ಗ್ರಾಮಗಳ ರೈತರು ಕ್ಷೇತ್ರದ ಶಾಸಕ ಕೆ ನೇಮಿರಾಜ ನಾಯ್ಕ ಇವರನ್ನು ಭೇಟಿ ಮಾಡಿ ತುಂಗಭದ್ರಾ ನದಿಯ ಇನ್ನೀರಿನ್ನು ಹಗರಿ ಹಳ್ಳದಲ್ಲಿ ಕಾಲುವೆ ಮುಖಾಂತರ ನೀರು ಹರಿಸಿದರೆ ಈ ಭಾಗದ ರೈತರ ಬೋರ್ವೆಲ್ ಗಳ ಅಂತರ್ಜಲ ಮಟ್ಟ ಹೆಚ್ಚಾಗುತ್ತದೆ ಎಂದು ಮನವಿ ಸಲ್ಲಿಸಿದರು. ಕೂಡಲೇ ಶಾಸಕರು ಮನವಿಗೆ ಸ್ಪಂದಿಸಿ ಇಟಾಚಿ ಕಳಿಸಿ ರೈತರ ಇಟಾಚಿಯನ್ನು ಕಳಿಸಿಕೊಟ್ಟು ರೈತರಿಗೆ ಬೆನ್ನೆಲುಬಾಗಿ ನಿಂತು, ರೈತರ ಜಮೀನುಗಳ ಬೋರವೆಲ್ ಗಳಲ್ಲಿ ಅಂತರ್ ಜಲ ಹೆಚ್ಚಾಗಿ ನೀರು ಕೊಡಿಸುವ ಜೊತೆಗೆ ಜಮೀನುಗಳಲ್ಲಿ ಒಂದು ಬೆಳೆಯನ್ನಾದರೂ ಬೆಳೆಯಲು ಸಹಕಾರ ನೀಡಿದರು. ಇದಕ್ಕೆ ಶಾಸಕರಿಗೆ ಈ ಎಲ್ಲಾ ಗ್ರಾಮದ ರೈತರು ಧನ್ಯವಾದಗಳು ತಿಳಿಸಿದ್ದಾರೆ.

## ಶ್ರಾವಣ ಮಾಸದ ವಿಶೇಷ ಆಚರಣೆ: ಮೂಕಪ್ಪ ಶ್ರೀಗಳಿಗೆ ಭರ್ಜರಿ ಬೇಡಿಕೆ!

### ಗುಡ್ಡದಮಲ್ಲಾಪುರ ಮೂಕಪ್ಪ ಶ್ರೀಗಳು ಹಾವೇರಿಯಲ್ಲಿ ನೆರೆಯ ರಾಜ್ಯಗಳ ಭಕ್ತರ ಮನೆಗಳಿಗೆ ಸಹ ತೆರಳಿ ಪೂಜೆ ಸಲ್ಲಿಸುತ್ತಾರೆ

• **ಉದಯವಾಹಿನಿ ಹಾವೇರಿ:**

ಶ್ರಾವಣ ಮಾಸವನ್ನು ಹಿಂದೂಗಳ ಪವಿತ್ರ ತಿಂಗಳಾಗಿ ಆಚರಿಸುತ್ತಾರೆ. ಶ್ರಾವಣ ಮಾಸದಲ್ಲಿ ದೇವಸ್ಥಾನಗಳಲ್ಲಿ ಮಠಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನಡೆಯುತ್ತವೆ. ಭಕ್ತರು ದೇವಸ್ಥಾನಗಳಿಗೆ ಮಠಗಳಿಗೆ ಪುಣ್ಯಕ್ಷೇತ್ರಗಳಿಗೆ ತೆರಳಿ ಪ್ರಾರ್ಥನೆ ಸಲ್ಲಿಸುತ್ತಾರೆ. ಅದೇ ರೀತಿ ವೀರಶೈವ ಪರಂಪರೆಯಲ್ಲಿ ಮಠದ ಶ್ರೀಗಳನ್ನು ಮನೆಗೆ ಕರೆದು ವಿಶೇಷ ಪೂಜೆ ಸಲ್ಲಿಸುವುದು ಸಂಪ್ರದಾಯ.

1 : ದಿನನಿತ್ಯ ಪ್ರಸಾದ ವ್ಯವಸ್ಥೆ ಇರುತ್ತೆ
2 : ತ್ರಿವಿಧ ಪೂಜೆ ಸಲ್ಲಿಸಿ, ರುದ್ರಾಭಿಷೇಕ
3 : ಪ್ರಸ್ತುತ ಶ್ರಾವಣ ಮಾಸದ ನಿಮಿತ್ತ

ಈ ರೀತಿಯ ಸಂಪ್ರದಾಯ ಕೇವಲ ಮನುಷ್ಯರೂಪಿ ಸ್ವಾಮೀಜಿಗಳಿಗಳಲ್ಲದೇ ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕಿನ ಗುಡ್ಡದಮಲ್ಲಾಪುರ ವೃಷಭ ರೂಪಿ ಮೂಕಪ್ಪ ಶ್ರೀಗಳಿಗೂ ಇದೆ. ಶ್ರಾವಣ ಮಾಸದಲ್ಲಿ ಈ ಮೂಕಪ್ಪ ಶ್ರೀಗಳನ್ನು ಭಕ್ತರು ಮನೆಗೆ ಬರಮಾಡಿಕೊಂಡು ತ್ರಿವಿಧ ಪೂಜೆ ಸಲ್ಲಿಸಿ, ರುದ್ರಾಭಿಷೇಕ ಮಾಡುತ್ತಾರೆ. ಈ ರೀತಿ ಮಾಡುವುದರಿಂದ ನಮ್ಮ ಇಷ್ಟಾರ್ಥಗಳು ಸಿದ್ದಿಸುತ್ತವೆ ಎನ್ನುವ ನಂಬಿಕೆ ಇಲ್ಲಿದೆ. ಗುಡ್ಡದಮಲ್ಲಾಪುರ ಮೂಕಪ್ಪ ಶ್ರೀಗಳು ಹಾವೇರಿಯಲ್ಲಿ ನೆರೆಯ ರಾಜ್ಯಗಳ ಭಕ್ತರ ಮನೆಗಳಿಗೆ ಸಹ ತೆರಳಿ ಪೂಜೆ ಸಲ್ಲಿಸುತ್ತಾರೆ. ಶ್ರಾವಣ ಮಾಸದಲ್ಲಿ ಮೂಕಪ್ಪ ಶ್ರೀಗಳನ್ನ ತಮ್ಮ ತಮ್ಮ ಮನೆಗೆ


ಉದಯವಾಹಿನಿ ಚಿತ್ರ

> ಗ್ರಾಮಸ್ಥರು ಮೂಕಪ್ಪ ಶ್ರೀಗಳಿಗೆ ಹಣ್ಣುಕಾಯಿ, ನೈವೇದ್ಯ ಅರ್ಪಿಸಿ, ಪೂಜೆ ಸಲ್ಲಿಸಿದರು. ಪೂಜೆ ಮುಗಿದ ನಂತರ ಸರತಿಯಲ್ಲಿ ನಿಂತು ಶ್ರೀಗಳ ಆಶೀರ್ವಾದ ಪಡೆದರು. ಕಾಲಿಗೆರಗುವ ಭಕ್ತರಿಗೆ ಮೂಕಪ್ಪ ಶ್ರೀಗಳು ಪಾದ ಇಟ್ಟು ಆಶೀರ್ವಾದ ಮಾಡಿದರು. ಈ ರೀತಿ ಪೂಜೆ ಸಲ್ಲಿಸಿದರೆ ಇಷ್ಟಾರ್ಥ ಸಿದ್ದಿಯಾಗುತ್ತವೆ ಎನ್ನುತ್ತಾರೆ. -ಭಕ್ತರು

ಆಹ್ವಾನಿಸಲು ಭಕ್ತರು ಮಠದಲ್ಲಿ ಸರತಿಯಲ್ಲಿ ನಿಂತಿರುತ್ತಾರೆ. ಪ್ರಸ್ತುತ ಶ್ರಾವಣ ಮಾಸದ ನಿಮಿತ್ತ ಹಾವೇರಿ ತಾಲ್ಲೂಕು ನಾಗನೂರು ಗ್ರಾಮಕ್ಕೆ ಮೂಕಪ್ಪ ಶ್ರೀಗಳು ಆಗಮಿಸಿದ್ದರು. ಮಠದಲ್ಲಿ ಹಿರಿಯ ಶ್ರೀ ಮತ್ತು ಕಿರಿಯ ಶ್ರೀಗಳಿದ್ದು ಇವರಿಗೆ ಚರ ಪಟ್ಟಾಧ್ಯಕ್ಷರು, ಸ್ಥಿರ ಪಟ್ಟಾಧ್ಯಕ್ಷರು ಎಂದು ಕರೆಯಲಾಗುತ್ತದೆ. 16ನೇ ಶತಮಾನದಲ್ಲಿ ಕಾಶಿಯಿಂದ ಆಗಮಿಸಿದ್ದ ಶ್ರೀಗಳ

> ಉಳಿದ ಮಠಗಳಲ್ಲಿ ಮನುಷ್ಯರೂಪಿ ಮಠಾಧೀಶರಿದ್ದರೆ, ನಮ್ಮಲ್ಲಿ ಈ ವೃಷಭಗಳೇ ಮಠಾಧೀಶರು. ಮಠದಲ್ಲಿ ಯಾವುದಾದರೂ ಕಾರ್ಯಕ್ರಮ ಮಾಡುವುದಾದರೆ ಇವರ ಅನುಮತಿ ಪಡೆದೇ ನಾವು ಮಾಡಬೇಕು ಎಂದು ತಿಳಿಸಿದರು. -ಮೂಕಪ್ಪ ಶ್ರೀ

ಅಣತಿಯಂತೆ ಇಲ್ಲಿ ವೃಷಭ ರೂಪಿ ಅಂದರೆ ಎತ್ತುಗಳನ್ನು ಮಠಾಧೀಶರನ್ನಾಗಿ ಮಾಡಲಾಗಿದೆ. ಶ್ರಾವಣ ಮಾಸ ಬಂದರೆ ಸಾಕು ಮಠಾಧೀಶರಿಗೆ ಎಲ್ಲಿಲ್ಲದ ಬೇಡಿಕೆ ಬರುತ್ತದೆ.

ಭಕ್ತರ ಮನೆಗೆ ತೆರಳಿ ಪಾದಪೂಜೆ ಸ್ವೀಕರಿಸುವ ಮೂಕಪ್ಪ ಶ್ರೀಗಳು ಮೂಕಪ್ಪ ಶ್ರೀಗಳು ಶ್ರಾವಣ ಮಾಸದಲ್ಲಿ ಮಾತ್ರ ಭಕ್ತರ ಮನೆಗೆ ತೆರಳಿ ಪಾದಪೂಜೆ ಸ್ವೀಕರಿಸುತ್ತಾರೆ. ಅವರಿಗೆ ವಿಶೇಷವಾದ ವಾಹನವಿದ್ದು ಆ ವಾಹನದಲ್ಲಿ ಶ್ರೀಗಳು ದಿನನಿತ್ಯ

> ಹಾವೇರಿಯಲ್ಲೊಂದು ವಿಶಿಷ್ಠ ಮಠ: ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕು ಗುಡ್ಡದಮಲ್ಲಾಪುರ ಗ್ರಾಮದಲ್ಲಿ ವಿಶಿಷ್ಠವಾದ ಮಠವಿದೆ. ಹುಚ್ಚೇಶ್ವರಮಠ ಎಂದು ಕರೆಯಲ್ಪಡುವ ಈ ಮಠದಲ್ಲಿ ವೃಷಭರೂಪಿ ಪೀಠಾಧಿಪತಿಗಳಿದ್ದಾರೆ. ಎಲ್ಲ ಮಠಗಳಲ್ಲಿ ಜಂಗಮರೂಪಿ ಪೀಠಾಧಿಪತಿಗಳಿದ್ದರೆ ಇಲ್ಲಿ ವೃಷಭರೂಪಿ ಪೀಠಾಧಿಪತಿಗಳು ಇರುವುದು ವಿಶೇಷ.

ನೂರಾರು ಕಿಲೋ ಮೀಟರ್ ಸಂಚರಿಸುತ್ತಾರೆ. ಭಕ್ತರು ತಮ್ಮ ಮನೆಗಳಲ್ಲಿ ವಿಶೇಷವಾದ ಕೊಠಡಿಯನ್ನು ಶ್ರೀಗಳಿಗೆ ಸಿದ್ದಪಡಿಸಿರುತ್ತಾರೆ. ಶ್ರೀಗಳಿಗೆ ಮೂರು ಹೊತ್ತು ಅಂದರೆ ತ್ರಿಕಾಲ ಸ್ನಾನ ಮಾಡಿಸಿ ಲಿಂಗಪೂಜೆ ಮಾಡಿಸಲಾಗುತ್ತದೆ. ನಂತರ ಉಭಯ ಶ್ರೀಗಳ ನಡುವೆ ರುದ್ರಾಭಿಷೇಕ ಸೇರಿದಂತೆ ವಿವಿಧ ಕೈಂಕರ್ಯಗಳನ್ನು ನಡೆಸಲಾಗುತ್ತದೆ. ಮಠದಿಂದಲೇ ಆಗಮಿಸುವ ವಟುಗಳು ಈ ಪೂಜಾ ಕಾರ್ಯಗಳನ್ನು ನಡೆಸುತ್ತಾರೆ. ಮೂಕಪ್ಪ ಶ್ರೀಗಳು ಮಠದಲ್ಲಿ ಇರಲಿ, ಅಥವಾ ಬೇರೆ ಕಡೆ ಬಿನ್ನಕ್ಕೆ ಹೋಗಿದ್ದರೂ, ಶ್ರೀ ಕ್ಷೇತ್ರದಲ್ಲಿ ನಿತ್ಯ ಅನ್ನದಾಸೋಹ ನಡೆಯುತ್ತಿರುತ್ತದೆ. ಅಜ್ಜ ಮಠದಲ್ಲಿರಲಿ ಭಕ್ತರ ಮನೆಯಲ್ಲಿರಲಿ ದಿನನಿತ್ಯ ಪ್ರಸಾದ ವ್ಯವಸ್ಥೆ ಇರುತ್ತೆ. ಇವರ ಭಕ್ತರು ಸಂಕಷ್ಟ ನಿವಾರಣೆಗೆ ಬಂದಾಗ ಇಷ್ಟು ಅಮವಾಸ್ಯೆ ನಡೆದುಕೊಳ್ಳುವಂತೆ ತಿಳಿಸುತ್ತಾರೆ. ಅಷ್ಟು ಅಮವಾಸ್ಯೆ ಮಠಕ್ಕೆ ಬಂದರೆ ಅವರ ಸಮಸ್ಯೆ ನಿವಾರಣೆಯಾಗಲಿದೆ ಎಂದು ತಿಳಿಸಿದರು.